ಪ್ರಚಾರ ಪುಸ್ತಕ ಮಾಲೆ

237

ಈಶೋಪನಿಷತ್ತು

ಉ. ಕಾ. ಸುಬ್ಬರಾಯಾಚಾರ್

ಪ್ರಚಾರ ಪುಸ್ತಕಮಾಲೆ-೨೩೭

ಈಶೋಪನಿಷತ್ತು

ಉ. ಕಾ. ಸುಬ್ಬರಾಯಾಚಾರ್

೧೯೮೩

ಮೊದಲನೆಯ ಮುದ್ರಣ: ೧೯೭೩

೫,೦೦೦ ಪ್ರತಿಗಳು

ಬೆಲೆ: ೨೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ "ಸೆನೆಟ್" ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರಿಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು,

ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವ ವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋ ದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ಇನ್ನೂರಮೂವತ್ತೈದು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಉ. ಕಾ. ಸುಬ್ಬರಾಯಾಚಾರ್ ಅವರ 'ಈಶೋಪನಿಷತ್ತು' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಕೆ. ಎಸ್. ಹೆಗ್ಡೆ

ಮೈಸೂರು ಕುಲಪತಿ

ವಿಷಯ ಸೂಚಿಕೆ

ಪುಟ

೧. ಪೀಠಿಕೆ

ಭಾರತೀಯರ ಪೂಜ್ಯ ಗ್ರಂಥಗಳೇ ವೇದಗಳು. ಇದುವರೆಗೆ ದೊರೆತಿರುವ ವೇದಗಳೆಂದರೆ ಋಗ್ವೇದ, ಯಜುರ್ವೇದ, ಸಾಮ ವೇದ ಮತ್ತು ಅಥರ್ವಣ ವೇದಗಳು. ವೇದವೆಂಬ ಶಬ್ದ, 'ವಿದ್' ಎಂಬ ಧಾತುವಿನಿಂದ ಬಂದದ್ದು. 'ವಿದ್' ಎಂಬು ದಕ್ಕೆ ಜ್ಞಾನ, ಇರುವಿಕೆ, ವಿಚಾರಣೆ, ಲಾಭ ಮೊದಲಾದ ಅರ್ಥ ಗಳಿವೆ. ಒಟ್ಟಿನಲ್ಲಿ 'ವೇದ' ಶಬ್ದಕ್ಕೆ ಜ್ಞಾನವೆಂದೇ ಅರ್ಥ. ಶಂಕರ ಮತ್ತು ಮಧ್ವರು ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ–ಈ ಹತ್ತು ಉಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದ್ದಾರೆ. ರಾಮಾನುಜರು ತಮ್ಮ 'ವೇದಾರ್ಥ ಸಂಗ್ರಹ' ದಲ್ಲಿ ದಶೋಪನಿಷತ್ತುಗಳನ್ನು ಕುರಿತು ಚರ್ಚಿಸಿದ್ದಾರೆ. ಹಲವು ಉಪನಿಷತ್ತುಗಳು ವೇದಗಳ ಕಡೆಯಲ್ಲಿ ಬಂದಿರುವುದರಿಂದ ವೇದಾಂತವೆಂಬ ಹೆಸರನ್ನು ಪಡೆದಿವೆ. ಒಟ್ಟಿನಲ್ಲಿ ವೇದಗಳ ವಿಕಸಿತ ಅರ್ಥವೇ ವೇದಾಂತವೆಂದು ಹೇಳಿದರೆ, ಹೆಚ್ಚು ಸಮಂಜಸವಾಗಿ ಕಾಣುತ್ತದೆ. ಈಶೋಪನಿಷತ್ತು ಶುಕ್ಲ ಯಜುರ್ವೇದದ ಸಂಹಿತೆಗೆ ಸೇರಿದೆ.

ದಶೋಪನಿಷತ್ತುಗಳು ಯಾವ ಯಾವ ವೇದಗಳಿಗೆ ಸೇರಿವೆ ಎಂಬುದನ್ನು ಸೂಚಿಸುತ್ತದೆ ಕೆಳಗಿನ ಸೂಚಿ :

1. ಋಗ್ವೇದ	ಐತರೇಯೋಪನಿಷತ್ತು
2. ಯಜುರ್ವೇದ	

	(ಅ) ಕೃಷ್ಣಯಜುರ್ವೇದ	ತೈತ್ತಿರೀಯೋಪನಿಷತ್ತು
		ಕಠೋಪನಿಷತ್ತು
	(ಆ) ಶುಕ್ಲಯಜುರ್ವೇದ	ಬೃಹದಾರಣ್ಯಕೋಪನಿಷತ್ತು
		ಈಶೋಪನಿಷತ್ತು
3.	ಸಾಮವೇದ	ಛಾಂದೋಗ್ಯೋಪನಿಷತ್ತು
		ಕೇನೋಪನಿಷತ್ತು
4.	ಅಥರ್ವವೇದ	ಮುಂಡಕೋಪನಿಷತ್ತು
		ಮಾಂಡೂಕ್ಯೋಪನಿಷತ್ತು
		ಪ್ರಶ್ನೋಪನಿಷತ್ತು

ಒಂದೊಂದು ವೇದವೂ ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳಿಂದ ಕೂಡಿರುತ್ತದೆ. ಸಂಹಿತೆಗಳಲ್ಲಿ ದೇವ ದೇವತೆಗಳ ವಿಚಾರ, ಸೃಷ್ಟಿಯ ವಿಚಾರ, ಜೀವನದ ಮಹತ್ವದ ವಿಚಾರ ಇತ್ಯಾದಿಗಳು ನಿರೂಪಿತವಾಗಿವೆ. ಪೂಜೆ, ಯಜ್ಞ, ಯಾಗಗಳ ವಿಚಾರಗಳು ಬ್ರಾಹ್ಮಣಗಳಲ್ಲಿ ಬರುತ್ತವೆ. ಧ್ಯಾನಾದಿ ವಿಚಾರಗಳು ಆರಣ್ಯಕಗಳಲ್ಲಿ ಬರುತ್ತವೆ. ಉಪನಿಷತ್ತುಗಳಲ್ಲಿ, ತತ್ತ್ವಜಿಜ್ಞಾಸುಗಳು ತಮ್ಮ ಗುರುಗಳ ಬಳಿ ಪ್ರಶ್ನಿಸಿದ, ಜಿಜ್ಞಾಸೆ ಮಾಡಿದ, ಸಂದೇಹಗಳನ್ನು ಪರಿಹರಿಸಿಕೊಂಡ, ವಿಚಾರಗಳ ನಿರೂಪಣೆ ಇದೆ.

ಉಪನಿಷತ್ ಎಂಬ ಪದದಲ್ಲಿ 'ಉಪ' ಮತ್ತು 'ನಿ' ಎಂಬ ಉಪಸರ್ಗಗಳೊಡನೆ 'ಸದ್' ಎಂಬ ಧಾತು ಸೇರಿಕೊಂಡಿದೆ. 'ಉಪ' ಎಂದರೆ ಹತ್ತಿರವೆಂದೂ, 'ನಿ' ಎಂದರೆ ನಿಷ್ಠೆಯೆಂದೂ, 'ಸದ್' ಎಂದರೆ ಕುಳಿತುಕೊಳ್ಳುವುದು, ಸಾಮೀಪ್ಯ, ಎಂದೂ ಅರ್ಥವಾಗುತ್ತದೆ. ಗುರುವಿನ ಬಳಿ ನಿಷ್ಠೆಯಿಂದ ಕುಳಿತು ತಿಳಿದ ತತ್ತ್ವವೇ ಉಪನಿಷತ್ತು. ಗಹನವಾದ

ಅರ್ಥಗಳಿಂದ ಕೂಡಿದ ಉಪನಿಷತ್ತುಗಳಿಗೆ ವಿಶೇಷ ಸ್ಥಾನವಿದೆ. ಈ ಉಪನಿಷತ್ತುಗಳ ಕೆಲವು ಮಂತ್ರಗಳ ಅರ್ಥವನ್ನು ಕೆಲವೆಡೆ ತಿಳಿಯುವುದು ಕಷ್ಟ. ಆದುದರಿಂದ ಅವುಗಳ ವ್ಯಾಖ್ಯಾನಗಳಲ್ಲಿ ಏಕರೂಪತೆ ಕಾಣುವುದಿಲ್ಲ. ಇದಕ್ಕೆ ಕಾರಣ, ಋಷಿಗಳ ಅನುಭೂತಿ ಸಂಕ್ಷಿಪ್ತವಾಗಿ ನಿರೂಪಿತವಾಗಿರುವುದು.

೨. ಉಪನಿಷತ್ತುಗಳ ವಿಚಾರಧಾರೆ

ಇಂದ್ರಿಯ ಗೋಚರವಾದ ಈ ಪ್ರಪಂಚದಲ್ಲಿ ಪರಾತ್ಪರ ಶಕ್ತಿ ಅಂತರ್ಗತವಾಗಿದೆ. "ಸರ್ವಂ ಖಲ್ವಿದಂ ಬ್ರಹ್ಮ"—ಸರ್ವವೂ ಬ್ರಹ್ಮವೇ ಎಂಬುದು ಪ್ರಾಚೀನ ಋಷಿಗಳ ದರ್ಶನ. ಅನಿತ್ಯತೆಯ ಗರ್ಭದಲ್ಲಿರುವುದೂ ಬ್ರಹ್ಮವೇ. ದೇವರು, ಬ್ರಹ್ಮ-ಈ ಎರಡು ಪದಗಳು ಏಕಾರ್ಥ ಸೂಚಿಗಳು. ಬ್ರಹ್ಮವು ಅನಂತ ಕಾಲದಿಂದ ಸ್ಥಿತವಾಗಿದೆ, ಅನಂತಕಾಲದ ವರೆಗೆ ಇರುತ್ತದೆ. ಉಪನಿಷತ್ತುಗಳಲ್ಲಿ ಸೂತ್ರರೂಪವಾದ ಪದಪುಂಜಗಳು ಬರುತ್ತವೆ. ಅವು ಮಾನವ ಕುಲಕ್ಕೇ ಸಂದೇಶ ನೀಡುವ ವಾಕ್ಯಗಳು. ಅಂತಹ ಕೆಲವು ವಾಕ್ಯಗಳು ಹೀಗಿವೆ:

೧. ತತ್ತ್ವಮಸಿ—ಛಾಂದೋಗ್ಯ ಉಪನಿಷತ್ತು. ತತ್ + ತ್ವಂ + ಅಸಿ. ಅದು (ಬ್ರಹ್ಮವು) ನೀನು ಆಗಿರುವೆ.

೨. ಅಯಂ ಆತ್ಮಾ ಬ್ರಹ್ಮ—ಬೃಹದಾರಣ್ಯಕ ಉಪನಿಷತ್ತು. ಈ ಆತ್ಮವೇ ಬ್ರಹ್ಮ.

೩. ಅಹಂ ಬ್ರಹ್ಮಾಸ್ಮಿ—ಬೃಹದಾರಣ್ಯಕ ಉಪನಿಷತ್ತು. ಅಹಂ ಬ್ರಹ್ಮ ಅಸ್ಮಿ. ನಾನು ಬ್ರಹ್ಮವಾಗಿದ್ದೇನೆ.

೪. ಸತ್ಯಂ ಜ್ಞಾನಂ ಅನಂತಂ ಬ್ರಹ್ಮ—ತೈತ್ತಿರೀಯೋಪನಿಷತ್ತು. ಬ್ರಹ್ಮವೆಂದರೆ ಸತ್ಯ, ಜ್ಞಾನ, ಅನಂತ.

ಪ್ರತಿಯೊಬ್ಬರಲ್ಲಿಯೂ ಬ್ರಹ್ಮವು ಅಂತರ್ಗತವಾಗಿದೆ. ಪರಮ ಜ್ಞಾನ ಪಡೆವವರೆಗೆ, ಜೀವನಿಗೆ ತಾನು ಪರಮಾತ್ಮನಿಗಿಂತ ಬೇರೆ ಎಂಬ ಭಾವನೆ ಇರುತ್ತದೆ. ಪರಮ ಸಾಕ್ಷಾತ್ಕಾರವಾದ ಬಳಿಕ 'ಸೋಽಹಂ'—ಬ್ರಹ್ಮವೇ ನಾನು ಎಂಬ ಅನುಭೂತಿಯಾಗುತ್ತದೆ. ಪ್ರಾಚೀನ ಋಷಿಗಳು ಬ್ರಹ್ಮ ಸ್ವರೂಪವೇನು ? ಎಂಬುದನ್ನು ಕುರಿತು ಜಿಜ್ಞಾಸೆ ಮಾಡಿದರು. ಅವರಿಗೆ ಪ್ರತ್ಯಗಾತ್ಮಾನುಭೂತಿ ಅಂದರೆ ನೇರವಾದ ಅನುಭೂತಿ ಇದ್ದುದರಿಂದ ಬ್ರಹ್ಮದ ಸ್ವರೂಪವನ್ನು ವರ್ಣಿಸಲು ಯತ್ನಿಸಿದರು.

ಬ್ರಹ್ಮವನ್ನು ಶಬ್ದಗಳಲ್ಲಿ ವರ್ಣಿಸಲಾಗುವುದಿಲ್ಲ. ಆದುದರಿಂದ ಅದರ ಸ್ವರೂಪ ಅನಿರ್ವಚನೀಯ. ಅದು ಅಂತವಿಲ್ಲದ್ದು, ಅನಂತ. ಅದು ಯಾವುದನ್ನೂ ಅಪೇಕ್ಷಿಸದ ಕಾರಣ ನಿರಪೇಕ್ಷ. ಬುದ್ಧಿಯಿಂದಾಗಲಿ, ಮನಸ್ಸಿನಿಂದಾಗಲಿ, ಅದನ್ನು ಗ್ರಹಿಸುವುದಕ್ಕಾಗುವುದಿಲ್ಲ. ಅದು ಸಚ್ಚಿದಾನಂದಸ್ವರೂಪವಾದುದು. ಸತ್– ಅಂದರೆ ಇರತಕ್ಕದ್ದು. ಅಂದರೆ ಅದು ಅವಿನಾಶಿ. ಅದು ಚಿತ್–ಅಂದರೆ ಜ್ಞಾನಸ್ವರೂಪವಾದುದು. ಅದು ಆನಂದ ಸ್ವರೂಪವಾದುದು. ಸಚ್ಚಿದಾನಂದವು ಸತ್, ಚಿತ್, ಆನಂದ– ಇವು ಮೂರನ್ನು ಒಳಗೊಳ್ಳುತ್ತದೆ. ಪರಬ್ರಹ್ಮದ ಅಂಶವೇ ಜೀವಾತ್ಮ, ಮೂಲರೂಪ ಬ್ರಹ್ಮಕ್ಕೂ ಆತ್ಮಕ್ಕೂ ವ್ಯತ್ಯಾಸವಿಲ್ಲ. ಬ್ರಹ್ಮವನ್ನು ತಿಳಿದವರು ಬ್ರಹ್ಮವೇ ಆಗುತ್ತಾರೆ.

ಬ್ರಹ್ಮ ವೇದ ಬ್ರಹ್ಮೈವ ಭವತಿ

—ಮುಂಡಕೋಪನಿಷತ್ತು ೩.೨.೯.

ಪ್ರಾಚೀನ ಋಷಿಗಳು ಜೀವನದ ಮುಖ್ಯ ಗುರಿ ಆತ್ಮ ಸಾಕ್ಷಾತ್ಕಾರ ಎಂದು ಹೇಳಿದರು. 'ಆತ್ಮಾನಂ ವಿದ್ಧಿ'—ಎಂದು ನೇರವಾಗಿ ಅವರು ನುಡಿದರು. ಆತ್ಮ ಅಥವಾ ಬ್ರಹ್ಮವನ್ನು ತಿಳಿಯುವುದು ಹೇಗೆ? ಎಂಬುದು ಮುಂದಿನ ಪ್ರಶ್ನೆ.

ನಾಯಮಾತ್ಮಾ ಬಲಹೀನೇನ ಲಭ್ಯೋ
ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್।

—ಮುಂಡಕೋಪನಿಷತ್ತು. ೩. ೨. ೪

"ಈ ಆತ್ಮನು ಬಲಹೀನನಿಗೆ ಲಭ್ಯನಲ್ಲ; ಪ್ರಮಾದದಿಂದಾಗಲಿ, ಯುಕ್ತವಲ್ಲದ ತಪಸ್ಸಿನಿಂದಾಗಲಿ, ದೊರಕುವವನಲ್ಲ."

ನಾವಿರತೋ ದುಶ್ಚರಿತಾನ್ನಾಶಾಂತೋ
ನಾಸಮಾಹಿತಃ।।
ನಾಶಾಂತಮಾನಸೋ ವಾಽಪಿ ಪ್ರಜ್ಞಾನೇನೈನ
ಮಾಪ್ನುಯಾತ್।।

—ಕಠೋಪನಿಷತ್ತು ೧.೨.೨೪

"ದುರಾಚಾರದಿಂದ ದೂರನಾಗದವನು, ಅಶಾಂತನು, ಚಾಂಚಲ್ಯ ದಿಂದ ಕೂಡಿದವನು, ಮನಶ್ಶಾಂತಿ ಇಲ್ಲದವನು, ಕೇವಲ ಮಾನಸಿಕ ಜ್ಞಾನದಿಂದ ಆತ್ಮನನ್ನು ಪಡೆಯಲಾರ."

ಆತ್ಮಜ್ಞಾನ ಪಡೆಯಲು ಆಚಾರವೂ ಆವಶ್ಯಕ. ಶುದ್ಧ ಸತ್ತ್ವರೇ ಆ ಜ್ಞಾನವನ್ನು ಪಡೆಯಲು ಯೋಗ್ಯರು ಎಂಬುದು ಪ್ರಾಚೀನ ಋಷಿಗಳ ದರ್ಶನ.

ಶಾಂತೋ ದಾನ್ತ ಉಪರತಸ್ತಿತಿಕ್ಷುಃ

ಸಮಾಹಿತೋ ಭೂತ್ವಾಽಽತ್ಮನ್ಯೇವಾತ್ಮಾನಂ ಪಶ್ಯತಿ।
—ಬೃಹದಾರಣ್ಯಕೋಪನಿಷತ್ತು. ೪.೪.೨೩

"ಸ್ಥಿರನೂ ಸಹನಶಕ್ತಿಯುಳ್ಳವನೂ ಇಂದ್ರಿಯ ನಿಗ್ರಹವುಳ್ಳವನೂ ಕಷ್ಟಗಳನ್ನು ಸಹಿಸುವವನೂ ಚಾಂಚಲ್ಯವಿಲ್ಲದವನೂ ಆತ್ಮನನ್ನು ತನ್ನಲ್ಲಿಯೇ ಕಾಣುತ್ತಾನೆ."

ಆತ್ಮಸಾಕ್ಷಾತ್ಕಾರವನ್ನು ವ್ಯಕ್ತಿಯೇ ಮಾಡಿಕೊಳ್ಳಬೇಕು. ಇತರರು ಕೇವಲ ಮಾರ್ಗದರ್ಶನ ಮಾಡಬಲ್ಲರು. ಅನುಭೂತಿ ವ್ಯಕ್ತಿಯದೇ. ಆತ್ಮಜ್ಞಾನಿಗೆ, ಈ ಸಕಲ ವಿಶ್ವದಲ್ಲಿರುವುದು ಬ್ರಹ್ಮವೊಂದೇ ಎಂಬ ಅನುಭವವಾಗುತ್ತದೆ. ವ್ಯಕ್ತಿಯ ವಿಕಾಸವಾದಂತೆ ಅವನ ಅನುಭವ ವಿಶಾಲವಾಗುತ್ತದೆ. ಜ್ಞಾನ ಮತ್ತು ನಿಷ್ಕಾಮ ಕರ್ಮಗಳು ಆ ವಿಕಾಸಕ್ಕೆ ಪ್ರೇರಕಶಕ್ತಿಗಳು. ಅಜ್ಞಾನದಿಂದ ಅಹಂಕಾರದ ವ್ಯಾಪ್ತಿ. ಅಹಂಕಾರದ ಪ್ರಧಾನ ಪ್ರವೃತ್ತಿ ಭೋಗಾಭಿಲಾಷೆ. ಅಜ್ಞಾನ ಮತ್ತು ಅಹಂಕಾರಗಳಿಂದ ದೂರವಾದಾಗ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ ಎಂಬುದನ್ನು ಪ್ರಾಚೀನ ಋಷಿಗಳು ಕಂಡು, ತಮ್ಮ ಶಿಷ್ಯರಿಗೆ ಬೋಧಿಸಿದರು. ಉಪನಿಷತ್ತುಗಳು ಬೆಳಕಿನತ್ತ ಕರೆದೊಯ್ಯುವ ದೀಪಗಳು. ಉಪನಿಷತ್ತುಗಳ ಅಧ್ಯಯನದಿಂದ ಭಾರತೀಯರು ಮಾತ್ರವಲ್ಲ, ಸಕಲ ಮಾನವರೂ ವಿಕಾಸಪಥದಲ್ಲಿ ಮುನ್ನಡೆಯಬಹುದು.

೩. ಈಶೋಪನಿಷತ್ತು

'ಈಶ' ಎಂಬ ಪದಕ್ಕೆ ಒಡೆಯ, ಸ್ವಾಮಿ, ಈಶ್ವರ, ಪ್ರಭು, ಪುರುಷ, ಪರಬ್ರಹ್ಮ ಮೊದಲಾದ ಅರ್ಥಗಳಿವೆ. ಪರಬ್ರಹ್ಮ

ನನ್ನು ಕುರಿತದ್ದು ಈಶೋಪನಿಷತ್ತು. ಈ ಉಪನಿಷತ್ತಿನಲ್ಲಿ ಹದಿನೆಂಟು ಮಂತ್ರಗಳಿವೆ. ಇದನ್ನು ರಚಿಸಿದ ಋಷಿಯ ಹೆಸರು ಸರಿಯಾಗಿ ತಿಳಿಯದು. ಕೆಲವರು, ಈ ಋಷಿ ದಧ್ಯಙ್ ಆಥರ್ವಣ ಎಂದು ಹೇಳುತ್ತಾರೆ. ಈ ಋಷಿ ಮಧುವಿದ್ಯೆಯ ದ್ರಷ್ಟೃ ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ. ಮಧುವಿದ್ಯೆ ಎಂದರೆ ಬ್ರಹ್ಮವಿದ್ಯೆ. ಈಶೋಪನಿಷತ್ತು ಆಕೃತಿಯಲ್ಲಿ ಚಿಕ್ಕದಾದರೂ, ಅಪರ ವಿಚಾರಧಾರೆ, ವೇದಾಂತಿಗಳನ್ನು ಆಕರ್ಷಿಸಿದೆ. ಈ ಉಪನಿಷತ್ತಿನ ಕೆಲವು ಮಂತ್ರಗಳ ಅರ್ಥ ಕೆಲವಡೆ ಅನುಕ್ತ. ಋಷಿ ತನ್ನ ಅನುಭೂತಿಯನ್ನು ಸಂಕ್ಷಿಪ್ತವಾಗಿ ಹೇಳಿರುವುದೇ ಈ ಕ್ಲಿಷ್ಟತೆಗೆ ಕಾರಣ.

ಈ ಉಪನಿಷತ್ತಿನ ಮೊದಲಲ್ಲಿ ಬರುವ ಶಾಂತಿಪಾಠ ಆಕರ್ಷಣೀಯ, ಅರ್ಥಗರ್ಭಿತ. ಇಲ್ಲಿ ಈಶ್ವರನು ಪೂರ್ಣ ಎಂದು ಹೇಳಿದೆ. ಪೂರ್ಣನಾದ ಈಶ್ವರನಿಂದ ಈ ವಿಶ್ವ ಬಂದಿದೆ. ಆದ್ದರಿಂದ ಈ ವಿಶ್ವವೂ ಪೂರ್ಣವೇ. ಪೂರ್ಣನಾದ ಈಶ್ವರನಿಂದ ಪೂರ್ಣವಾದ ಈ ವಿಶ್ವವನ್ನು ತೆಗೆದರೆ ಉಳಿಯುವುದು ಪೂರ್ಣನಾದ ಈಶ್ವರನೇ! ಅವನು ಸದಾ ಪೂರ್ಣ. ಈಶ್ವರನು ಪರಿಪೂರ್ಣ ಎಂಬ ಅರ್ಥ ಈ ಶಾಂತಿಪಾಠದಲ್ಲಿದೆ.

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಅದಃ ಪೂರ್ಣಂ, ಇದಂ ಪೂರ್ಣಂ, ಪೂರ್ಣಾತ್
ಪೂರ್ಣಂ ಉದಚ್ಯತೇ,

ಪೂರ್ಣಸ್ಯ ಪೂರ್ಣಂ ಆದಾಯ ಪೂರ್ಣಂ ಏವ ಅವಶಿಷ್ಯತೇ.

ಅದಃ = ಅದು (ಪರಬ್ರಹ್ಮವು), ಪೂರ್ಣಂ = ಪೂರ್ಣವು ಇದಂ = ಇದು (ಈ ವಿಶ್ವವು), ಪೂರ್ಣಂ = ಪೂರ್ಣವು, ಪೂರ್ಣಾತ್ = ಪೂರ್ಣದಿಂದ, ಪೂರ್ಣಂ = ಪೂರ್ಣವು, ಉದಚ್ಯತೇ = ಹೊರಬಂದಿದೆ, ಪೂರ್ಣಸ್ಯ = ಪೂರ್ಣದ, ಪೂರ್ಣಂ = ಪೂರ್ಣವನ್ನು, ಆದಾಯ = ತೆಗೆದ ಬಳಿಕ, ಪೂರ್ಣಂ ಏವ = ಪೂರ್ಣವೇ, ಅವಶಿಷ್ಯತೇ = ಉಳಿಯುತ್ತದೆ.

ಪರಬ್ರಹ್ಮವೂ ಪೂರ್ಣ, ಈ ವಿಶ್ವವೂ ಪೂರ್ಣ. ಪೂರ್ಣವಾದ ಪರಬ್ರಹ್ಮದಿಂದ ಪೂರ್ಣವಾದ ಈ ವಿಶ್ವ ಹೊರಬಂದಿದೆ. ಪೂರ್ಣವಾದ ಈ ವಿಶ್ವವನ್ನು ತೆಗೆದರೆ, ಉಳಿಯುವುದು ಪೂರ್ಣವೇ.

ಪರಬ್ರಹ್ಮಕ್ಕೆ ಚ್ಯುತಿ ಇಲ್ಲ. ಅದು ಪರಿಪೂರ್ಣ. ಅದು ಅಮರ. ಅದರ ಸೃಷ್ಟಿಯಾದ ಈ ವಿಶ್ವಕ್ಕೂ ಅದರ ಪೂರ್ಣತೆ ಇದೆ. ಈ ವಿಶ್ವಕ್ಕೆ ಪ್ರಳಯವಾದರೆ, ಪರಬ್ರಹ್ಮವು ನಷ್ಟವಾಗುವುದಿಲ್ಲ. ಅದು ಪೂರ್ಣವಾಗಿಯೇ ಇರುತ್ತದೆ.

ಮಂತ್ರ ೧

ಈ ಜಗತ್ತು ಅಸ್ಥಿರ, ಮಾಯೆ ಎಂದು ಹಲವರು ಅಲಕ್ಷಿಸುವುದುಂಟು. ಈಶೋಪನಿಷತ್ತು, ಈಶ್ವರನು ಜಗತ್ತಿನಲ್ಲಿಯೂ ವ್ಯಾಪ್ತನಾಗಿದ್ದಾನೆ– ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಜಗತ್ತಿನಲ್ಲಿ ಹುಟ್ಟಿದ ಬಳಿಕ, ಈಶ್ವರನು ನಮಗೆ ಕೊಟ್ಟಿರುವುದರಲ್ಲಿ ತೃಪ್ತರಾಗಿ, ಪರರ ವಸ್ತುಗಳಿಗೆ ಆಸೆಪಡದೆ, ದೊರಕಿದ್ದರಲ್ಲಿ ಸಂತೋಷಗೊಂಡು ಬದುಕುವುದೇ ಧರ್ಮ– ಎಂಬ ತತ್ತ್ವ ಈಶೋಪನಿಷತ್ತಿನ ಮೊದಲ ಮಂತ್ರದಲ್ಲಿ ಹೇಳಿದೆ.

ಈಶಾವಾಸ್ಯಮಿದಗ್ಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀಥಾ
ಮಾ ಗೃಧಃ ಕಸ್ಯಸ್ವಿದ್ಧನಮ್ ॥೧॥

ಜಗತ್ಯಾಂ ಯತ್ಕಿಂಚ ಜಗತ್ (ಅಸ್ತಿ), ಇದಂ ಸರ್ವಂ ಈಶಾ ಆವಾಸ್ಯಂ, ತೇನ ತ್ಯಕ್ತೇನ ಭುಂಜೀಥಾಃ, ಕಸ್ಯಸ್ವಿತ್ ಧನಂ ಮಾ ಗೃಧಃ.

ಜಗತ್ಯಾಂ=ಜಗತ್ತಿನಲ್ಲಿ, ಯತ್ಕಿಂಚ=ಯಾವ ಯಾವುದು, ಜಗತ್ = ಚಲನಾತ್ಮಕವಾದುದು, (ಅಸ್ತಿ=ಇದೆಯೋ), ಇದಂ ಸರ್ವಂ=ಇದೆಲ್ಲವೂ, ಈಶಾ=ಈಶ್ವರನಿಂದ, ಆವಾಸ್ಯಂ= ತುಂಬಿರುತ್ತದೆ. ತೇನ=ಅವನಿಂದ (ಈಶ್ವರನಿಂದ), ತ್ಯಕ್ತೇನ= ದತ್ತವಾದುವರಿಂದ, ಭುಂಜೀಥಾಃ=ಬದುಕಬೇಕು. ಕಸ್ಯಸ್ವಿತ್ =ಬೇರೆಯುವರ, ಧನಂ=ಧನವನ್ನು, ಮಾ ಗೃಧಃ=ಆಶಿಪಡ ಬೇಡ.

೧. ಚಲನಾತ್ಮಕವಾದ ಈ ಜಗತ್ತು, ಈಶ್ವರನಿಂದ ವ್ಯಾಪ್ತ ವಾಗಿದೆ. ಈಶ್ವರನಿಂದ ದತ್ತವಾದುದರಲ್ಲಿ ಸಂತುಷ್ಟರಾಗಿ ಬದುಕ ಬೇಕು. ಪರರ ಧನಕ್ಕಾಗಿ ಆಶೆಪಡಬಾರದು.

'ಈಶಾವಾಸ್ಯಂ' ಎಂಬುದಕ್ಕೆ ಎರಡು ರೀತಿಯ ಅರ್ಥಗಳು ಪ್ರಚಲಿತವಾಗಿವೆ.

೧. ಈಶಾ + ವಾಸ್ಯಂ = ಈಶನಿಂದ ಮುಚ್ಚಲ್ಪಡತಕ್ಕದ್ದು
೨. ಈಶಾ + ಆವಾಸ್ಯಂ = ಈಶ್ವರನಿಂದ ತುಂಬಿರತಕ್ಕದ್ದು

ಇಲ್ಲಿ ಎರಡನೆಯ ಅರ್ಥವನ್ನೇ ಇಟ್ಟುಕೊಂಡಿದೆ.

'ತೇನ ತ್ಯಕ್ತೇನ ಭುಂಜೀಥಾಃ' ಎಂಬುದಕ್ಕೆ ಎರಡು ರೀತಿಯ ಅರ್ಥಗಳು ರೂಢಿಯಲ್ಲಿ ಬಂದಿವೆ.

೧. ತೇನ=(ತಸ್ಮಾತ್) ಆದುದರಿಂದ
ತ್ಯಕ್ತೇನ=ತ್ಯಾಗದಿಂದ
ಭುಂಜೀಥಾಃ=ಸುಖಿಸಬೇಕು.

೨. ತೇನ=ಅವನಿಂದ (ಈಶ್ವರನಿಂದ)
ತ್ಯಕ್ತೇನ=ದತ್ತವಾದುದರಿಂದ
ಭುಂಜೀಥಾಃ=ಸುಖಿಸಬೇಕು, ಬದುಕಬೇಕು.

ಇಲ್ಲಿ ಎರಡನೆಯ ಅರ್ಥವನ್ನೇ ಇಟ್ಟುಕೊಂಡಿದೆ.

ಮಂತ್ರ ೨

ರೋಗರುಜಿನಗಳ ಬೀಡಾದ ಈ ಜಗತ್ತಿನಲ್ಲಿ ಹುಟ್ಟಿದ ಬಳಿಕ ಬೇಗನೆ ಸಾಯುವುದೇ ಉತ್ತಮವೆಂಬ ಹೇಡಿತನವನ್ನು ಉಪನಿಷತ್ತು ಬೋಧಿಸುವುದಿಲ್ಲ. ಹುಟ್ಟಿದ ಬಳಿಕ ಧೀರರಾಗಿ, ಕಷ್ಟಗಳನ್ನು ಎದುರಿಸಿ, ನೂರುವರ್ಷಗಳ ಕಾಲ ಸಂತೋಷವಾಗಿ ಬದುಕಬೇಕೆಂಬ ಆದರ್ಶವನ್ನು ಉಪನಿಷತ್ತು ನಮ್ಮ ಮುಂದಿಡುತ್ತದೆ. ಪ್ರತಿಯೊಬ್ಬರೂ ಕ್ರಿಯಾಶಾಲಿಗಳಾಗಿ ಬದುಕಬೇಕೆಂಬ ಪ್ರಚಂಡ ಕಾರ್ಯೋತ್ಸಾಹವನ್ನು ತುಂಬುತ್ತದೆ ಉಪನಿಷತ್ತಿನ ಸಂದೇಶ.

ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥೨॥

ಇಹ ಕರ್ಮಾಣಿ ಕುರ್ವನ್ ಏವ, ಶತಂ ಸಮಾಃ ಜಿಜೀವಿಷೇತ್. ಏವಂ ನರೇ ತ್ವಯಿ. ಇತಃ ಅನ್ಯಥಾ ನ ಅಸ್ತಿ, ಕರ್ಮ ನ ಲಿಪ್ಯತೇ.

ಇಹ = ಈ ಲೋಕದಲ್ಲಿ, ಕರ್ಮಾಣಿ = ಕೆಲಸಗಳನ್ನು ಕುರ್ವನ್ ಏವ = ಮಾಡುತ್ತಲೆ, ಶತಂ = ನೂರು, ಸಮಾಃ = ವರ್ಷಗಳ ಕಾಲ, ಜಿಜೀವಿಷೇತ್ = ಬದುಕಲು ಆಶಿಸಬೇಕು. ಏವಂ = ಹೀಗೆ, ನರೇ ತ್ವಯಿ = ಮನುಷ್ಯನಾದ ನಿನಗೆ, ಇತಃ = ಇದಕ್ಕಿಂತ, ಅನ್ಯಥಾ = ಬೇರೆ (ಮಾರ್ಗವು), ನ ಅಸ್ತಿ = ಇಲ್ಲ. ಕರ್ಮ = ಕರ್ಮವು, ನ ಲಿಪ್ಯತೇ = ಅಂಟುವುದಿಲ್ಲ.

೨. ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತಲೆ ನೂರು ವರ್ಷಗಳ ಕಾಲ ಬದುಕಲು ಇಚ್ಛಿಸಬೇಕು. ಮನುಷ್ಯನಿಗೆ ಇದಕ್ಕಿಂತ ಬೇರೆ ಮಾರ್ಗವಿಲ್ಲ. ಕರ್ಮವು ಮನುಷ್ಯನಿಗೆ ಅಂಟುವುದಿಲ್ಲ.

ಜೀವನದ ಗುರಿ ನಿಷ್ಕ್ರಿಯೆಯಲ್ಲ; ಆತ್ಮಸಾಕ್ಷಾತ್ಕಾರ. ಆತ್ಮಸಾಕ್ಷಾತ್ಕಾರಕ್ಕೆ ಈ ವಿಶ್ವ ಅಡ್ಡಿಯಾಗುವುದಿಲ್ಲ. ಏಕೆಂದರೆ ವಿಶ್ವವೂ ಈಶ್ವರನಿಂದಲೇ ಬಂದುದು. ಈಶ್ವರನು ವಿಶ್ವಾತೀತನಾದರೂ ವಿಶ್ವದಲ್ಲಿ ನೆಲಸಿದ್ದಾನೆ. ಕರ್ಮವಿಮುಖತೆಯನ್ನೂ ಕರ್ಮಸಂನ್ಯಾಸವನ್ನೂ ಈಶೋಪನಿಷತ್ತು ಒಪ್ಪುವುದಿಲ್ಲ. ಸತ್ಕರ್ಮದಲ್ಲಿ ತೊಡಗಿಯೇ ಈಶ್ವರ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬುದು ಉಪನಿಷತ್ತಿನ ದರ್ಶನ.

ಹುಟ್ಟಿದ ಬಳಿಕ ಧೀರರಾಗಿ ಕಷ್ಟಗಳನ್ನು ಎದುರಿಸಿ, ತಮಗೆ ದೊರಕಿದುದರಲ್ಲಿ ಸಂತೃಪ್ತರಾಗಿ, ನೂರು ವರ್ಷಗಳ ಕಾಲ ಸಂತೋಷವಾಗಿ ಬದುಕಲು ಎಲ್ಲರೂ ಯತ್ನಿಸಬೇಕು. ಹೇಡಿಯಾಗಿ ಜೀವನದಿಂದ ಎಂದೂ ಪಲಾಯನ ಮಾಡಬಾರದು.

ಪ್ರತಿಯೊಬ್ಬರೂ ಕ್ರಿಯಾಶೀಲರಾಗಿ ಬದುಕಬೇಕೆಂಬ ಪ್ರಚಂಡ ಕಾರ್ಯೋತ್ಸಾಹವನ್ನು ತುಂಬುತ್ತದೆ ಈ ಉಪನಿಷತ್ತಿನ ಸಂದೇಶ.

ಸತ್ಕರ್ಮದಲ್ಲಿ ತೊಡಗಿರುವ ವ್ಯಕ್ತಿಗೆ ಕರ್ಮಲೇಪವಿಲ್ಲ. ಅಹಂಕಾರದಿಂದ ತೊಡಗುವ ಕರ್ಮಕ್ಕೆ ಸುಖದುಃಖಗಳ ದ್ವಂದ್ವಾನುಭವ. ಅಹಂಕಾರದಿಂದ ದೂರವಾಗಿ ಕರ್ಮದಲ್ಲಿ ತೊಡಗಿದಾಗ ಆತ್ಮಕ್ಕೆ ರಸಾನುಭೂತಿ; ಕರ್ಮಲೇಪವಿಲ್ಲ. ದೇಹ ಧಾರಿಯಾದ ಆತ್ಮನೊಡನೆ ಈ ಲೋಕದಲ್ಲಿ ನೂರು ವರ್ಷಗಳ ಕಾಲ ಸತ್ಕರ್ಮದಲ್ಲಿ ತೊಡಗಿ ಬದುಕುವುದು ಮಾನವ ಧರ್ಮ.

ಮಂತ್ರ ೩

ಆತ್ಮ ಘಾತುಕರೆಂದರೆ, ಆತ್ಮವನ್ನು ಉಪೇಕ್ಷಿಸಿ ಅಹಂಕಾರ ವನ್ನೇ ಸರ್ವಸ್ವವೆಂದು ತಿಳಿದು ಮದಾಂಧರಾಗಿ ಬದುಕುವವರು. ಇಂಥವರು ದೇಹ ತ್ಯಜಿಸಿದ ಬಳಿಕ ಕತ್ತಲಲ್ಲಿ ಬದುಕಬೇಕಾಗು ತ್ತದೆ. ಸಾವಿರುವುದು ಶರೀರಕ್ಕೆ. ಆತ್ಮಕ್ಕೆ ಸಾವಿಲ್ಲ. ಜೀವದ ಸಂಸ್ಕಾರಕ್ಕನುಗುಣವಾಗಿ ಆತ್ಮನು ಅಹಂಕಾರ, ಮನಸ್ಸು, ಬುದ್ಧಿ, ಶರೀರ–ಇವುಗಳ ಕವಚದೊಂದಿಗೆ ಪುನಃ ಜಗತ್ತನ್ನು ಪ್ರವೇಶಿಸುತ್ತಾನೆ. ಜನನ ಮರಣಗಳ ಕೊಂಡಿಯಿಂದ ಕಳಚಿ ಕೊಂಡು ಪರಬ್ರಹ್ಮದಲ್ಲಿ ಐಕ್ಯವಾಗುವುದೇ ಮೋಕ್ಷ.

ದೇಹ ತ್ಯಜಿಸಿದ ಬಳಿಕ ಏನಾಗುತ್ತದೆ? ಈ ವಿಚಾರವಾದ ಸ್ಪಷ್ಟ ಚಿತ್ರ ಈ ಉಪನಿಷತ್ತಿನಲ್ಲಿ ದೊರಕುವುದಿಲ್ಲ.

ಅಸೂರ್ಯಾ ನಾಮ ತೇ ಲೋಕಾ
ಅಂಧೇನ ತಮಸಾವೃತಾಃ ।

ತಾಗ್ ಂಸ್ತೇ ಪ್ರೇತ್ಯಾಭಿಗಚ್ಛಂತಿ
ಯೇ ಕೇ ಚಾತ್ಮಹನೋ ಜನಾಃ ॥೩॥

ಅಸೂರ್ಯಾಃ ನಾಮ ತೇ ಲೋಕಾಃ, ಅಂಧೇನ ತಮಸಾ ಆವೃತಾಃ, ಯೇ ಕೇ ಚ, ಆತ್ಮಹನಃ ಜನಾಃ, ತೇ, ಪ್ರೇತ್ಯ ತಾನ್ ಅಭಿಗಚ್ಛಂತಿ.

ಅಸೂರ್ಯಾಃ ನಾಮ=ಸೂರ್ಯನಿಲ್ಲದ (ಬೆಳಕಿಲ್ಲದ), ತೇ=ಆ, ಲೋಕಾಃ=ಲೋಕಗಳು, ಅಂಧೇನ ತಮಸಾ= ಗಾಢಾಂಧಕಾರದಿಂದ, ಆವೃತಾಃ=ಆವರಿಸ್ಪಟ್ಟಿವೆ, ಚ=ಮತ್ತು ಯೇ ಕೇ=ಯಾರು ಯಾರು, ಆತ್ಮ ಹನಃ=ಆತ್ಮಘಾತುಕ ರಾದ, ಜನಾಃ=ಜನರೋ, ತೇ=ಅವರು, ಪ್ರೇತ್ಯ=ಸತ್ತು, ತಾನ್=ಅವುಗಳನ್ನು (ಆ ಲೋಕಗಳನ್ನು), ಅಭಿಗಚ್ಛಂತಿ= ಸೇರುತ್ತಾರೆ.

೩. ಆತ್ಮಘಾತುಕರಾದ ಜನರು, ಸತ್ತ ಬಳಿಕ ಸೂರ್ಯ ನಿಲ್ಲದ ಗಾಢಾಂಧಕಾರವಾದ ಲೋಕಗಳನ್ನು ಸೇರುತ್ತಾರೆ.

ಆತ್ಮಘಾತುಕರಿಗೆ ಲೌಕಿಕವೇ ಸರ್ವಸ್ವ. ಅವರಿಗೆ ಇಹಲೋಕದ ಭೋಗಾನುಭವವೇ ಏಕಮಾತ್ರ ಗುರಿ. ಅವರು ಬದುಕುವುದು ಅಜ್ಞಾನದಲ್ಲಿ. ಜ್ಞಾನಿಗೆ, ಅಜ್ಞಾನದ ಲೋಕ ಗಾಢಾಂಧಕಾರಮಯ. ಅಜ್ಞಾನಿಗಳು ಬದುಕಿದ್ದರೂ ಸತ್ತಂತೆಯೇ ಸರಿ.

ಅಸೂರ್ಯಾಃ ಎಂಬುದಕ್ಕೆ ಅಸುರ್ಯಾಃ ಎಂಬ ಪಾಠವೂ ಇದೆ. ಅಸುರ್ಯಾಃ ಎಂಬುದಕ್ಕೆ ಅಸುರ ಸಂಬಂಧವಾದ ಎಂದು ಅರ್ಥವಾಗುತ್ತದೆ. ಇಲ್ಲಿ ಅಸೂರ್ಯಾಃ ಎಂದರೆ ಸೂರ್ಯನಿಲ್ಲದ, ಬೆಳಕಿಲ್ಲದ—ಎಂಬ ಪಾಠವನ್ನೇ ಇಟ್ಟುಕೊಂಡಿದೆ.

ಮಂತ್ರ ೪

ಈ ಮಂತ್ರದಲ್ಲಿ ಬ್ರಹ್ಮ ಸ್ವರೂಪದ ವರ್ಣನೆ ಇದೆ. ಕೇವಲ ದೃಷ್ಟಿಯಿಂದ ಬ್ರಹ್ಮ ಮತ್ತು ಆತ್ಮ ಅಭಿನ್ನರು. ಬ್ರಹ್ಮದ ಶಕ್ತಿ ಸಾಮರ್ಥ್ಯಗಳು ಆತ್ಮನಲ್ಲೂ ಇವೆ. ಬ್ರಹ್ಮ ಸ್ವರೂಪವನ್ನು ಉಪನಿಷತ್ತು ಮನೋಜ್ಞವಾಗಿ ಚಿತ್ರಿಸಿದೆ. ಬ್ರಹ್ಮವು ಅಚಲ, ಏಕ, ಮನಸ್ಸಿಗಿಂತಲೂ ವೇಗವಾಗಿ ಚಲಿಸ ಬಲ್ಲದು. ಅದು ಇಂದ್ರಿಯ ಗಮ್ಯವಲ್ಲ. ಅದು ನಿಶ್ಚಲ ವಾಗಿದ್ದರೂ ಇತರ ವಸ್ತುಗಳಿಗಿಂತ ವೇಗವಾಗಿ ಓಡಬಲ್ಲುದು. ಅದು ದೇಹ, ಪ್ರಾಣ, ಮನಸ್ಸು, ದಿವ್ಯಸತ್ಯ, ದಿವ್ಯಆನಂದ, ದಿವ್ಯಚೇತನ ಹಾಗೂ ಇಚ್ಛಾಶಕ್ತಿಗಳನ್ನು ನಿಯಂತ್ರಿಸುತ್ತದೆ.

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥೪॥

(ಬ್ರಹ್ಮ) ಅನೇಜತ್ ಏಕಂ ಮನಸಃ ಜವೀಯಃ,
ದೇವಾಃ ಏನತ್ ನ ಆಪ್ನುವನ್, ತತ್ ಪೂರ್ವಂ ಅರ್ಷತ್,
ತತ್ ತಿಷ್ಠತ್ ಧಾವತಃ ಅನ್ಯಾನ್ ಅತ್ಯೇತಿ. ತಸ್ಮಿನ್(ಸತಿ)
ಮಾತರಿಶ್ವಾ ಅಪಃ ದಧಾತಿ.

(ಬ್ರಹ್ಮ)=ಬ್ರಹ್ಮವು, ಅನೇಜತ್=ಅಚಲ, ಏಕಂ= ಒಂದೇ, ಮನಸಃ=ಮನಸ್ಸಿಗಿಂತ, ಜವೀಯಃ=ವೇಗವುಳ್ಳದ್ದು, ದೇವಾಃ=ಇಂದ್ರಿಯಗಳು, ಏನತ್=ಇವನ್ನು (ಬ್ರಹ್ಮವನ್ನು), ನ ಆಪ್ನುವನ್=ಪಡೆಯಲಿಲ್ಲ, ತತ್=ಅದು (ಬ್ರಹ್ಮವು), ಪೂರ್ವಂ=ಮುಂದೆ, ಅರ್ಷತ್=ಹೋಗಿರುತ್ತದೆ, ತಿಷ್ಠತ್=

ಇದ್ದಲ್ಲೇ ಇದ್ದು, ಧಾವತಃ=ಓಡುತ್ತಿರುವ, ಅನ್ಯಾನ್=ಇತರರನ್ನು, ಅತ್ಯೇತಿ=ಅತಿಕ್ರಮಿಸುತ್ತದೆ, ತಸ್ಮಿನ್ (ಸತಿ)=ಅದು (ಬ್ರಹ್ಮವು), ಮಾತರಿಶ್ವಾ=ವಿಶ್ವಚೈತನ್ಯದ ಮೂಲಕ, ಅಪಃ=ಎಲ್ಲ ಕ್ರಿಯೆಗಳನ್ನೂ, ದಧಾತಿ=ನಡೆಸುತ್ತದೆ.

೪. ಅಚಲವೂ, ಏಕವೂ ಮನಸ್ಸಿಗಿಂತ ವೇಗವಾದುದೂ, ಇಂದ್ರಿಯಗಳು ಮುಟ್ಟಲಾರದುದೂ, ಓಡುವ ಎಲ್ಲವನ್ನೂ ಇದ್ದಲ್ಲೇ ಇದ್ದು ಅತಿಕ್ರಮಿಸುವುದೂ ಆದ ಬ್ರಹ್ಮವು, ವಿಶ್ವ ಚೈತನ್ಯದ ಮೂಲಕ ಎಲ್ಲ ಕ್ರಿಯೆಗಳೂ ನಡೆಯುವಂತೆ ಮಾಡುತ್ತದೆ.

ಈ ಮಂತ್ರದಲ್ಲಿ 'ಮಾತರಿಶ್ವಾ' ಮತ್ತು 'ಅಪಃ' ಎಂಬ ಎರಡು ಪದಗಳಿಗೆ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. 'ಮಾತರಿಶ್ವಾ' ಎಂದರೆ ವಾಯುವೆಂದೂ 'ಅಪಃ' ಎಂದರೆ ಜಲ ಪ್ರವಾಹ, ಕರ್ಮಪ್ರವಾಹ ಎಂದೂ ಸಾಮಾನ್ಯವಾಗಿ ಅರ್ಥ ಹೇಳುವುದುಂಟು. ಆದರೆ, 'ಮಾತರಿಶ್ವಾ' ಎಂಬ ಪದಕ್ಕೆ ವಿಶ್ವಚೈತನ್ಯ ಎಂದು ಅರ್ಥಮಾಡಿಕೊಳ್ಳುವುದು ಉತ್ತಮ. ಶ್ರೀ ಅರವಿಂದರು ಇದೇ ಅರ್ಥವನ್ನಿಟ್ಟುಕೊಂಡಿದ್ದಾರೆ. ಅವರು 'ಅಪಃ' ಎಂಬ ಪದಕ್ಕೆ ಏಳು ವಿಶ್ವತತ್ವಗಳು ಹಾಗೂ ಅವುಗಳ ಕ್ರಿಯೆ—ಎಂದು ಅರ್ಥ ಮಾಡಿದ್ದಾರೆ. ಆ ಏಳು ತತ್ತ್ವಗಳೆಂದರೆ, ದೇಹ, ಪ್ರಾಣ, ಮನಸ್ಸು, ದಿವ್ಯಸತ್ಯ, ದಿವ್ಯ ಆನಂದ, ದಿವ್ಯ ಇಚ್ಛಾಶಕ್ತಿ ಮತ್ತು ಪ್ರಜ್ಞೆ, ಹಾಗೂ ದಿವ್ಯ ಚೇತನ. ಹೀಗೆ ಉಪನಿಷತ್ತಿನ ಅರ್ಥ ವಿಶಾಲವಾಗುತ್ತದೆ.

ಮಂತ್ರ ೫

ಬ್ರಹ್ಮ ಸ್ವರೂಪದ ವರ್ಣನೆ ಈ ಮಂತ್ರದಲ್ಲಿಯೂ ಮುಂದು

ವರಿಯುತ್ತದೆ. ಈ ಮಂತ್ರದಲ್ಲಿ ಬ್ರಹ್ಮದ ಅಪಾರ ಶಕ್ತಿಯು ವರ್ಣನೆ ಇದೆ. ಬ್ರಹ್ಮವು ಚಲಿಸಬಹುದು, ಚಲಿಸದೆಯೂ ಇರಬಹುದು, ಅದು ದೂರದಲ್ಲಿರಬಹುದು, ಹತ್ತಿರವೂ ಇರಬಹುದು. ಅದು ಎಲ್ಲವುದರ ಅಂತರ್ಯದಲ್ಲಿರಬಹುದು. ಬಾಹ್ಯದಲ್ಲಿಯೂ ಇರಬಹುದು. ಒಟ್ಟಿನಲ್ಲಿ ಅದರ ಶಕ್ತಿ ಅಪಾರ. ಅದು ಸರ್ವವ್ಯಾಪಿ.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ
ಬಾಹ್ಯತಃ ॥೫॥

ತತ್ ಏಜತಿ, ತತ್ ನ ಏಜತಿ- ತತ್ ದೂರೇ, ತತ್ ಉ ಅಂತಿಕೇ, ತತ್ ಅಸ್ಯ ಸರ್ವಸ್ಯ ಅಂತಃ, ತತ್ ಉ ಅಸ್ಯ ಸರ್ವಸ್ಯ ಬಾಹ್ಯತಃ.

ತತ್ = ಅದು (ಬ್ರಹ್ಮವು), ಏಜತಿ = ಚಲಿಸುತ್ತದೆ, ತತ್ = ಅದು (ಬ್ರಹ್ಮವು), ನ ಏಜತಿ = ಚಲಿಸುವುದಿಲ್ಲ, ತತ್ = ಅದು (ಬ್ರಹ್ಮವು), ದೂರೇ = ದೂರದಲ್ಲಿದೆ, ತತ್ ಉ = ಅದು (ಬ್ರಹವು), ಅಂತಿಕೇ = ಹತ್ತಿರದಲ್ಲಿದೆ, ತತ್ = ಅದು(ಬ್ರಹ್ಮವು), ಅಸ್ಯ = ಈ, ಸರ್ವಸ್ಯ = ಎಲ್ಲದರ, ಅಂತಃ = ಒಳಗೆ, (ಇರುತ್ತದೆ), ತತ್ ಉ = ಅದು (ಬ್ರಹ್ಮವು), ಅಸ್ಯ ಸರ್ವಸ್ಯ = ಈ ಎಲ್ಲದರ ಬಾಹ್ಯತಃ = ಹೊರಗೆ (ಇರುತ್ತದೆ).

೫. ಬ್ರಹ್ಮವು ಚಲಿಸುತ್ತದೆ, ಚಲಿಸುವುದಿಲ್ಲ. ಅದು ದೂರದಲ್ಲಿದೆ, ಹತ್ತಿರದಲ್ಲಿದೆ. ಅದು ಎಲ್ಲದರ ಅಂತರ್ಯದಲ್ಲಿದೆ, ಬಾಹ್ಯದಲ್ಲಿದೆ.

ನಾಲ್ಕನೆ ಮಂತ್ರ ಮತ್ತು ಐದನೆ ಮಂತ್ರಗಳಲ್ಲಿ ಬ್ರಹ್ಮ ಸ್ವರೂಪದ ವರ್ಣನೆ ಬಂದಿದೆ. ಕೆಲವರು ಈ ಮಂತ್ರಗಳಲ್ಲಿ ಬ್ರಹ್ಮಕ್ಕೆ ಬದಲಾಗಿ ಆತ್ಮನೆಂದೇ ಅರ್ಥ ಮಾಡಿದ್ದಾರೆ. ಶ್ರೀ ಅರವಿಂದರು ಮಾತ್ರ ಬ್ರಹ್ಮವೆಂದೇ ವ್ಯಾಖ್ಯಾನ ಮಾಡಿದ್ದಾರೆ. ಈಶ, ಆತ್ಮ—ಈ ಎರಡು ಶಬ್ದಗಳೂ ಪುಲ್ಲಿಂಗದಲ್ಲಿವೆ. ಬ್ರಹ್ಮ ಶಬ್ದವು ನಪುಂಸಕಲಿಂಗದಲ್ಲಿರುತ್ತದೆ. ಮೇಲಣ ಎರಡು ಮಂತ್ರಗಳಲ್ಲಿ 'ತತ್' ಎಂಬುದು ನಪುಂಸಕಲಿಂಗದಲ್ಲಿರುವುದ ರಿಂದ ಬ್ರಹ್ಮನೆಂದೇ ಅರ್ಥ ಮಾಡುವುದು ಸೂಕ್ತ.

ಕಾಲ, ದೇಶ, ದೂರ, ಸಾಮೀಪ್ಯ, ಭೂತ, ಭವಿಷ್ಯತ್, ವರ್ತಮಾನ ಎಲ್ಲವೂ ಬ್ರಹ್ಮದಲ್ಲಿಯೇ ಇರುತ್ತವೆ—ಎಂಬ ದರ್ಶನ ಈ ಉಪನಿಷತ್ತಿನದು.

ಮಂತ್ರ ೬

ಆರು ಮತ್ತು ಏಳನೆಯ ಮಂತ್ರಗಳಲ್ಲಿ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡವರ ಸ್ವರೂಪದ ವರ್ಣನೆ ಇದೆ. ಬ್ರಹ್ಮದ ಅಂಶವೇ ಜೀವಾತ್ಮ. ಆದುದರಿಂದ ಬ್ರಹ್ಮದ ಶಕ್ತಿ ಸಾಮರ್ಥ್ಯ ಗಳು ಜೀವಾತ್ಮನಲ್ಲಿಯೂ ಇರುತ್ತವೆ. ಅನೇಕವಾಗಿ ಕಾಣುವ ಈ ವಿಶ್ವದಲ್ಲಿ ಇರುವುದು ಆತ್ಮನೇ. ಅದೇ ಬ್ರಹ್ಮ. ಈ ಸಾಕ್ಷಾತ್ಕಾರವಾದಾಗ ಮೋಹವಾಗಲಿ ಶೋಕವಾಗಲಿ ಇರುವುದಿಲ್ಲ.

ಯಸ್ತು ಸರ್ವಾಣಿ ಭೂತಾ-
ನ್ಯಾತ್ಮನ್ಯೇವಾನುಪಶ್ಯತಿ।
ಸರ್ವಭೂತೇಷು ಚಾತ್ಮಾನಂ
ತತೋ ನ ವಿಜುಗುಪ್ಸತೇ ॥೬॥

ತು ಯಃ ಸರ್ವಾಣಿ ಭೂತಾನಿ ಆತ್ಮನಿ ಏವ ಅನುಪಶ್ಯತಿ ಚ ಸರ್ವಭೂತೇಷು ಆತ್ಮಾನಂ ಅನುಪಶ್ಯತಿ ಸಃ ತತಃ ನ ವಿಜುಗುಪ್ಸತೇ.

ತು=ಆದರೆ, ಯಃ=ಯಾರು, ಸರ್ವಾಣಿ=ಎಲ್ಲ, ಭೂತಾನಿ=ಪ್ರಾಣಿಗಳನ್ನು, ಆತ್ಮನಿ ಏವ=ಆತ್ಮನಲ್ಲಿಯೆ, ಅನುಪಶ್ಯತಿ=ನೋಡುವನೋ, ಚ=ಮತ್ತು, ಸರ್ವ=ಎಲ್ಲ, ಭೂತೇಷು=ಪ್ರಾಣಿಗಳಲ್ಲಿ, ಆತ್ಮಾನಂ=ಆತ್ಮವನ್ನು, ಅನು ಪಶ್ಯತಿ=ನೋಡುವನೋ, ಸಃ=ಅವನು, ತತಃ=ಈ ಕಾರಣ ದಿಂದ, ನ ವಿಜುಗುಪ್ಸತೇ=ಜುಗುಪ್ಸೆ ಪಡುವುದಿಲ್ಲ.

೬. ಯಾರು ಸರ್ವಪ್ರಾಣಿಗಳನ್ನು ಆತ್ಮನಲ್ಲಿಯೇ ಕಾಣು ತ್ತಾನೋ ಯಾರು ಆತ್ಮನನ್ನು ಸರ್ವ ಪ್ರಾಣಿಗಳಲ್ಲಿ ಕಾಣು ತ್ತಾನೋ, ಅಂಥವನು ಜುಗುಪ್ಸೆ ಪಡುವುದಿಲ್ಲ.

ಆತ್ಮಜ್ಞಾನದ ಪ್ರಥಮ ಸೋಪಾನವೆಂದರೆ ವಿಶ್ವದಲ್ಲಿ ಓತ ಪ್ರೋತವಾಗಿರುವ ಏಕತೆಯ ದರ್ಶನ. ಆಗ ಸಹಾನುಭೂತಿ, ಪ್ರೇಮ, ಮೈತ್ರಿ, ವೈಶಾಲ್ಯ, ಇತರರ ಉದ್ಧಾರಕ್ಕಾಗಿ ಕ್ರಿಯಾ ಶೀಲತೆ—ಇವು ಜೀವನದಲ್ಲಿ ಅರಳುತ್ತವೆ. ಎಲ್ಲೆಲ್ಲಿಯೂ ಸಚ್ಚಿದಾನಂದವನ್ನೆ ಕಂಡಾಗ, ಜ್ಞಾನ ಪೂರ್ಣವಾಗುತ್ತದೆ. ಆಗ ಪ್ರಾಣದ ಲೀಲೆಯೇ ಜಡವೆಂದೂ ಮನಸ್ಸಿನ ಲೀಲೆಯೇ ಪ್ರಾಣವೆಂದೂ ಸತ್ಯದ ಲೀಲೆಯೇ ಮನಸ್ಸೆಂದೂ ಸಚ್ಚಿದಾನಂದದ ಲೀಲೆಯೇ ಸತ್ಯವೆಂದೂ ಬ್ರಹ್ಮದ ಲೀಲೆಯೇ ಸಚ್ಚಿದಾನಂದ ವೆಂದೂ ಅರಿವಾಗುತ್ತದೆ.

ಬ್ರಹ್ಮ
|
ಸಚ್ಚಿದಾನಂದ
|
ಸತ್ವ
|
ಮನಸ್ಸು
|
ಪ್ರಾಣ
|
ಜಡ

ಈ ಅನುಭೂತಿಯಿಂದ ವಿಕರ್ಷಣೆ, ಸಂಕೋಚ, ಭಯ, ದ್ವೇಷ, ವಕ್ರಭಾವನಾರೂಪವಾದ ಜುಗುಪ್ಸೆ, ದೂರವಾಗಿ ಪೂರ್ಣ ಸಮತ್ವ ಪ್ರತಿಷ್ಠಿತವಾಗುತ್ತದೆ.

ಮಂತ್ರ ೭

ವಿಶ್ವವೆಲ್ಲ ಆತ್ಮಮಯವೆಂದು ತಿಳಿದಾಗ ದ್ವಂದ್ವಾನುಭೂತಿ ಇರುವುದಿಲ್ಲ. ಆಗ ಕೇವಲ ಆತ್ಮಾನುಭೂತಿ. ಆತ್ಮನನ್ನು ಎಲ್ಲೆಡೆ ಕಾಣುವವಂಗೆ ಮೋಹವೂ ಇಲ್ಲ, ಶೋಕವೂ ಇಲ್ಲ. ಈ ರೀತಿ ವಿಶ್ವಾತ್ಮರಾದಾಗ ಅಖಂಡಾನುಭವ!

ಯಸ್ಮಿನ್ ಸರ್ವಾಣಿ ಭೂತಾ-
ನ್ಯಾತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಶ್ಶೋಕ
ಏಕತ್ವಮನುಪಶ್ಯತಃ ॥೭॥

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮಾ ಏವ ಅಭೂತ್, ತತ್ರ ಏಕತ್ವಂ ಅನುಪಶ್ಯತಃ ವಿಜಾನತಃ ಕಃ ಮೋಹಃ ಕಃ ಶೋಕಃ.

ಯಸ್ಮಿನ್ = ಎಲ್ಲಿ, ಸರ್ವಾಣಿ = ಎಲ್ಲ, ಭೂತಾನಿ = ಪ್ರಾಣಿಗಳು, ಆತ್ಮಾ ಏವ ಅಭೂತ್ = ಆತ್ಮನೇ ಆಗಿದೆಯೋ, ತತ್ರ = ಅಲ್ಲಿ, ಏಕತ್ವಂ = ಏಕತ್ವವನ್ನು, ಅನುಪಶ್ಯತಃ = ಕಾಣುವ, ವಿಜಾನತಃ = ತಿಳಿದವನಿಗೆ, ಕಃ ಮೋಹಃ = ಮೋಹವೆಲ್ಲಿ? ಕಃ ಶೋಕಃ = ಶೋಕವೆಲ್ಲಿ?

೭. ಆತ್ಮನೇ ಸರ್ವ ಪ್ರಾಣಿಗಳಾಗಿವೆ ಎಂದು ತಿಳಿದು, ಏಕತ್ವವನ್ನು ಎಲ್ಲೆಡೆ ಕಾಣುವ ಜ್ಞಾನಿಗಿ ಮೋಹವೆಲ್ಲಿ? ದುಃಖವೆಲ್ಲಿ?

ಈ ಜಗತ್ತಿನಲ್ಲಿರುವುದು ಆತ್ಮನೇ ಎಂಬ ಅನುಭೂತಿ ಯಾದಾಗ ಎಲ್ಲೆಡೆಯೂ ಆತ್ಮನೇ ಗೋಚರವಾಗುತ್ತಾನೆ. ಈ ಏಕತ್ವದ ಅನುಭವವಾದಾಗ ಮೋಹವೂ ಇರುವುದಿಲ್ಲ, ದುಃಖವೂ ಇರುವುದಿಲ್ಲ. ಆಗ ಇರುವುದು ಕೇವಲ ಆನಂದಾನುಭೂತಿ. ಈ ಸ್ಥಿತಿಯಲ್ಲಿರುವವನೆ ಜ್ಞಾನಿ.

ಉಪನಿಷತ್ತಿನ ಆರಂಭದ 'ಈಶಾವಾಸ್ಯಮಿದಂ ಸರ್ವಂ' ಎಂಬ ಉಲ್ಲೇಖಕ್ಕೆ ಸಮರ್ಥನೆ ಆರು ಮತ್ತು ಏಳನೆ ಮಂತ್ರಗಳಲ್ಲಿ ನಿರೂಪಿತವಾಗಿದೆ. ಈಶ್ವರನೇ ಈ ವಿಶ್ವದಲ್ಲಿ ಅಂತರ್ಯಾಮಿಯಾಗಿದ್ದಾನೆ. ವ್ಯಕ್ತಿ ವ್ಯಕ್ತಿಗಳಲ್ಲಿರುವ ಈಶ್ವರ ಶಕ್ತಿಯನ್ನೇ ಆತ್ಮ ಎಂದು ಸಂಕೇತಿಸುವುದು. ಆತ್ಮಜ್ಞಾನಿಗೆ ಈ ವಿಶ್ವದಲ್ಲಿರುವುದು ಆತ್ಮವೊಂದೇ ಎಂಬ ಅನುಭೂತಿಯಾಗುತ್ತದೆ. ಈಶ್ವರನು ವಿಶ್ವಮಯನೂ ಹೌದು, ವಿಶ್ವಾತೀತನೂ ಹೌದು ಎಂಬ ಅರಿವು ಜ್ಞಾನಿಗೆ ಸಾಧ್ಯ.

ಮಂತ್ರ ೮

ಪರಮಾತ್ಮನ ಸ್ವರೂಪವನ್ನು ಬುದ್ಧಿ ಗೋಚರವಾಗುವಂತೆ ವರ್ಣಿಸುವುದು ಬಹು ಕಷ್ಟವಾದರೂ ಮಂತ್ರದ್ರಷ್ಟಾರನಾದ ಋಷಿ ಈ ಮಂತ್ರದಲ್ಲಿ ಸಮರ್ಥವಾಗಿ ಯತ್ನಿಸಿರುವುದು ಕಾಣುತ್ತದೆ. ಪರಮಾತ್ಮನ ಪ್ರಕ್ಷೇಪಣವೇ ಈ ವಿಶ್ವ. 'ಪರಿಭೂಃ' ಎಂದರೆ ಸರ್ವತ್ರ ಮುನ್ನಡೆಯುವುದು, ವ್ಯಾಪಿಸುವುದು. ಅವನ ಇಚ್ಛೆಯಂತೆ ಎಲ್ಲವೂ ನಡೆಯುತ್ತದೆ. ಆ ಇಚ್ಛೆ, ಸ್ವಾರ್ಥ ಮೂಲವಾದ ಮನುಷ್ಯನ ಇಚ್ಛೆಯಂತಲ್ಲ. ಅದು ಕಾಲದೇಶಾತೀತವಾದ ಇಚ್ಛೆ. ಪರಮಾತ್ಮನು ಇಚ್ಛಿಸಿದುದು ಆಗುತ್ತದೆ. ಅದಕ್ಕೆ ವಿರೋಧವಿಲ್ಲ. ಅವನು ತಾನೇ ತಾನಾದವನು, ಅವನಿಗೆ ಅವನೇ ಒಡೆಯ. ಅವನನ್ನೇ ಈಶ, ಸ್ವಯಂಭು ಎಂದು ಕರೆಯುವುದು. ಅವನು ನಿರ್ಮಲ, ಪಾಪಲೇಪವಿಲ್ಲದವನು. ಅವನು ಮಾಂಸಖಂಡ, ನರ ಮೊದಲಾದುವುಗಳಿಂದ ನಿರ್ಮಿತನಾದವನಲ್ಲ. ಅವನು ಪ್ರತಿಭಾವಂತ. ಆದುದರಿಂದ ಅವನನ್ನು ಕವಿ ಎಂದು ಕರೆಯುವುದು. 'ಕವಿ' ಎಂಬ ಪದಕ್ಕೆ ವೇದದಲ್ಲಿ ಕ್ರಾಂತದರ್ಶಿ ಸತ್ಯದರ್ಶಿ ಎಂಬ ವಿಶಾಲಾರ್ಥವಿದೆ. ಕ್ರಾಂತದರ್ಶಿ ಎಂದರೆ ದೂರದರ್ಶಿ, ಎಂದು ಅರ್ಥ. 'ಮನೀಷಿ' ಎಂದರೆ ಮನೋನಿಗ್ರಹವಿರುವವನು. ಮನೀಷಿತ್ವ ಪರಮಾತ್ಮನ ಮತ್ತೊಂದು ಸಾಮರ್ಥ್ಯ. ಅವನೇ ಜಗತ್ತಿನ ನಿಯಾಮಕ. ಅವನನ್ನು ಮನುಷ್ಯನ ಆಕೃತಿಯೊಂದಿಗೆ ಹೋಲಿಸಲಾಗುವುದಿಲ್ಲ. ಅವನು ನಿರ್ಗುಣ. ವಿಶ್ವವು ಶಾಶ್ವತವಾಗಿ ನಡೆಯುವಂತೆ ಅವನು ವಿಧಾಯಕ ಮಾಡಿದ್ದಾನೆ. ಪರಮಾತ್ಮನ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ, ಅವನ ಸಾಕ್ಷಾತ್ಕಾರವಾಗ

ಬೇಕು. ಆಗ, ಜೀವ, ಜಗತ್ತು ಮತ್ತು ಈಶ್ವರ–ಈ ಮೂರರ ಸಂಪೂರ್ಣ ಅರ್ಥ ಸ್ಪಷ್ಟವಾಗುವುದು.

ಸ ಪರ್ಯಗಾಚ್ಛುಕ್ರಮಕಾಯಮವ್ರಣ–
ಮಸ್ನಾವಿರಗ್ಂ ಶುದ್ಧಮಪಾಪವಿದ್ಧಮ್।
ಕವಿರ್ಮನೀಷೀ ಪರಿಭೂಸ್ಸ್ವಯಂಭೂ–
ರ್ಯಾಥಾತಥ್ಯತೋಽರ್ಥಾನ್ ವ್ಯದಧಾ–
ಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

ಸಃ ಪರ್ಯಗಾತ್ ಶುಕ್ರಂ ಅಕಾಯಂ ಅವ್ರಣಂ ಅಸ್ನಾವಿರಂ ಶುದ್ಧಂ ಅಪಾಪವಿದ್ಧಂ ಕವಿಃ ಮನೀಷೀ ಪರಿಭೂಃ ಸ್ವಯಂಭೂಃ, (ಸಃ) ಅರ್ಥಾನ್ ಯಾಥಾತಥ್ಯತಃ ಶಾಶ್ವತೀಭ್ಯಃ ಸಮಾಭ್ಯಃ ವ್ಯದಧಾತ್.

ಸಃ=ಅವನು (ಪರಮಾತ್ಮನು), ಪರ್ಯಗಾತ್=ಮುನ್ನಡೆಯುವವನು, ಶುಕ್ರಂ=ಜ್ಯೋತಿರ್ಮಯನು, ಅಕಾಯಂ=ಶರೀರವಿಲ್ಲದವನು, ಅವ್ರಣಂ=ವ್ರಣವಿಲ್ಲದವನು, ಅಸ್ನಾಯುಃ=ಮಾಂಸಖಂಡ ಮತ್ತು ನರಗಳಿಲ್ಲದವನು, ಶುದ್ಧಂ=ಪರಿಶುದ್ಧನು, ಅಪಾಪವಿದ್ಧಂ=ಪಾಪಲೇಪವಿಲ್ಲದವನು, ಕವಿಃ=ಕ್ರಾಂತದರ್ಶಿ, ಮನೀಷೀ=ಮನಸ್ಸಿನ ಮೇಲೆ ಪ್ರಭುತ್ವವುಳ್ಳವನು, ಪರಿಭೂಃ=ಸರ್ವವ್ಯಾಪಿ, (ಸಃ=ಅವನು), ಅರ್ಥಾನ್=ಕರ್ತವ್ಯಗಳನ್ನು, ಯಾಥಾತಥ್ಯತಃ=ಯುಕ್ತರೀತಿಯಲ್ಲಿ, ಶಾಶ್ವತೀಭ್ಯಃ ಸಮಾಭ್ಯಃ =ಶಾಶ್ವತವಾಗಿ, ವ್ಯದಧಾತ್=ವಿಧಾಯಕ ಮಾಡಿದನು.

೮. ಪರಮಾತ್ಮನು ಎಲ್ಲೆಡೆಯೂ ಮುನ್ನಡೆಯುವವನು, ಜ್ಯೋತಿರ್ಮಯನು, ಶರೀರವಿಲ್ಲದವನು, ವ್ರಣವಿಲ್ಲವದನು,

ಮಾಂಸಖಂಡ ಮತ್ತು ನರಗಳಿಲ್ಲದವನು, ಶುದ್ಧನು, ಪಾಪಲೇಪ ವಿಲ್ಲದವನು, ಕ್ರಾಂತದರ್ಶಿ, ಮನಸ್ಸಿನ ಮೇಲೆ ಪ್ರಭುತ್ವವುಳ್ಳ ವನು, ಸರ್ವವ್ಯಾಪಿ ಮತ್ತು ಅಧಿಪತಿ. ಕರ್ತವ್ಯಗಳನ್ನು ಯುಕ್ತ ರೀತಿಯಲ್ಲಿ ಶಾಶ್ವತವಾಗಿ ಅವನು ವಿಧಿಸಿದನು.

ಬ್ರಹ್ಮ, ಪರಬ್ರಹ್ಮ, ಪರಮಾತ್ಮ, ಪರಮಪುರುಷ, ಈಶ್ವರ, ಪರಮೇಶ್ವರ, ಭಗವಂತ–ಈ ಎಲ್ಲ ಪದಗಳೂ ಪರಾತ್ಪರ ಶಕ್ತಿ ಯನ್ನು ಕುರಿತು ಹೇಳಿದವು. ಪರಮಾತ್ಮನು ಸಚ್ಚಿದಾನಂದ ರೂಪಿ. ಸತ್ + ಚಿತ್ + ಆನಂದ—ಇವು ಮೂರು ಪರಮಾತ್ಮನ ಗುಣಗಳು. 'ಸತ್' ಎಂದರೆ ಸದಾ ಇರುವವನು. 'ಚಿತ್' ಎಂದರೆ ಜ್ಞಾನ ಸ್ವರೂಪ. 'ಆನಂದ' ಎಂದರೆ ಪರಮಸುಖ ಸ್ವರೂಪ. ಅವನು ನಿರ್ಗುಣನಾದುದರಿಂದ, ಅವನು ಎಲ್ಲ ಗುಣ ಗಳಿಂದ ಕೂಡಿದವನು. ಅವನು ಗುಣಾತೀತನಾದುದರಿಂದ ಅವನ ಗುಣಗಳಿಗೆ ಮಿತಿಯಿಲ್ಲ. ಆತ್ಮಜ್ಞಾನ ಲಭಿಸುವ ತನಕ ಪರ ಮಾತ್ಮನ ಅರಿವು ಸಾಧ್ಯವಿಲ್ಲ. ಈ ಕಾರಣದಿಂದಲೆ ಆತ್ಮಜ್ಞಾನದ ಹಿರಿಮೆ.

ಮಂತ್ರ ೯

ವಿದ್ಯೆ, ಅವಿದ್ಯೆ ಎಂಬ ಪದಗಳು ವಿಶೇಷ ಅರ್ಥವನ್ನು ಸೂಚಿಸುತ್ತವೆ. ಋಷಿಯ ದೃಷ್ಟಿಯಲ್ಲಿ ವಿದ್ಯೆಯೆಂದರೆ ಆತ್ಮಾನು ಸಂಧಾನ, ಅದಕ್ಕಾಗಿ ಕೈಗೊಳ್ಳುವ ಸಾಧನೆ. ಲೌಕಿಕ ಕರ್ಮ ಗಳು ಮತ್ತು ಲೌಕಿಕ ಜ್ಞಾನಗಳೆ ಅವಿದ್ಯೆ. ಅವಿದ್ಯೆಯೆಂದರೆ ಕೇವಲ ಅಜ್ಞಾನ ಎಂದು ಇಲ್ಲಿ ಅರ್ಥ ಮಾಡಬಾರದು. ಉಪ ನಿಷತ್ತಿನ ಎರಡನೆ ಮಂತ್ರದಲ್ಲಿ ಲೋಕದಲ್ಲಿ ಹುಟ್ಟಿದ ಬಳಿಕ ಸತ್ಕರ್ಮ ಮಾಡುತ್ತಲೆ ನೂರು ವರ್ಷಗಳ ಕಾಲ ಬದುಕಬೇಕೆಂಬ ಆದೇಶವಿದೆ. ಆದರೆ ಜೀವನ, ಕರ್ಮದಲ್ಲಿಯೆ ಮುಕ್ತಾಯವಾಗ

ಬಾರದು. ಕರ್ಮದೊಡನೆ ಆತ್ಮಜ್ಞಾನವನ್ನೂ ಸಾಧಿಸಬೇಕು. ಆತ್ಮಜ್ಞಾನವನ್ನು ಮರೆತ ಕರ್ಮ ನಮ್ಮನ್ನು ಘೋರಾಂಧಕಾರದತ್ತ ಎಳೆದೊಯ್ಯುತ್ತದೆ. ಆವಶ್ಯಕವಾದ ಲೌಕಿಕ ಕರ್ಮಗಳನ್ನು ಮರೆತರೆ, ಮತ್ತಷ್ಟು ಘೋರಾಂಧಕಾರದಲ್ಲಿ ಬೀಳಬೇಕಾಗುತ್ತದೆ. ಮಾನವರು ಜಗತ್ತಿನಲ್ಲಿ ಹುಟ್ಟಿದ ಬಳಿಕ, ಬದುಕಬೇಕಾದರೆ ಕರ್ಮದಲ್ಲಿ ನಿರತರಾಗಲೇ ಬೇಕು. ಕರ್ಮವನ್ನು ತ್ಯಜಿಸಿ, ಆತ್ಮಜ್ಞಾನಿಯಾಗುವೆನೆಂದು ಹಂಬಲಿಸಿದರೆ, ಬದುಕಲು ಆವಶ್ಯಕವಾದ ಸಂಪತ್ತಿನ ಉತ್ಪತ್ತಿಯನ್ನು ನಿರಾಕರಿಸಿದಂತಾಗುತ್ತದೆ. ಆಹಾರ ಮತ್ತು ವಸತಿಗಳ ಕೊರತೆಗಳಿಂದ ಮನುಷ್ಯ ಬದುಕುವುದು ಹೇಗೆ? ಈ ಕೊರತೆಗಳಿಂದ ಶರೀರದ ರಕ್ಷೆಯೂ ಅಸಾಧ್ಯವಾಗುತ್ತದೆ. ಆತ್ಮಜ್ಞಾನ ಸಾಧಕನೂ ಬದುಕಬೇಕಾದರೆ, ಆವಶ್ಯಕವಾದ ಲೌಕಿಕ ಕರ್ಮಗಳನ್ನು ಮಾಡಲೇಬೇಕು. ಲೌಕಿಕ ಕರ್ಮಗಳಲ್ಲಿ ನಿರತರಾದವರು ಆತ್ಮಜ್ಞಾನಕ್ಕಾಗಿ ಯತ್ನಿಸದಿದ್ದರೆ, ಅವರು ಮಾಡುವ ಕರ್ಮಗಳಿಗೆ ಬೆಲೆ ಬರುವುದಿಲ್ಲ. ಆದರೆ ಎತ್ತಿನಂತೆ ಸದಾ ದುಡಿಯುವುದು ಜೀವನದ ಗುರಿಯಲ್ಲ. ಕರ್ಮದೊಡನೆ ಜ್ಞಾನವೂ ಸೇರಿದಾಗ ಜೀವನಕ್ಕೆ ಬೆಲೆ ಬರುತ್ತದೆ.

ಮೃತ್ಯುವಿಂದ ಆಚ್ಛಾದಿತವಾದ ಈ ಲೋಕದಲ್ಲಿ ರೋಗರೂಪವಾದ ಕ್ಲೇಶಗಳು ಬರುತ್ತವೆ. ಈ ವಿಪತ್ತುಗಳಿಂದ ಪಾರಾಗಲು ಕರ್ಮ ಆವಶ್ಯಕ. ರೋಗ ನಿವಾರಣೆಗೆ ಔಷಧಗಳು ಬೇಕು. ಔಷಧ ತಯಾರಿಸಲು ಕೆಲಸಮಾಡಬೇಕು. ಪ್ರಚಂಡ ಕ್ರಿಯಾಶಕ್ತಿ ಇದ್ದರೆ ಮಾತ್ರ ಮೃತ್ಯುವಿಂದ ಮನುಷ್ಯ ಪಾರಾಗಬಹುದು. ಸಿಡುಬು, ಕಾಲರಾ, ಪ್ಲೇಗ್ ಮೊದಲಾದ ಭಯಂಕರ ರೋಗಗಳು ಮಾನವ ಕುಲವನ್ನೇ ಕಬಳಿಸಲು ಆರಂಭಿಸಿದಾಗ,

ವಿಜ್ಞಾನಿಗಳ ಕ್ರಿಯಾಶೀಲ ಸಂಶೋಧನೆಗಳಿಂದ ದಿವ್ಯೌಷಧ ಗಳನ್ನು ಕಂಡುಹಿಡಿಯುವುದು ಸಾಧ್ಯವಾಯಿತು. ಮನುಷ್ಯರು ನೂರು ವರ್ಷಗಳ ಕಾಲ ಬದುಕಲು ಇಚ್ಛಿಸುವುದು ಸಹಜ. ಅದಕ್ಕಿಂತ ಮೊದಲೇ ಸಾಯುವುದು ಅಸ್ವಾಭಾವಿಕ.

ಅಂಧಂ ತಮಃ ಪ್ರವಿಶಂತಿ
ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ
ಯ ಉ ವಿದ್ಯಾಯಾಗ್ಂ ರತಾಃ ॥ ೯ ॥

ಯೇ ಅವಿದ್ಯಾಮ್ ಉಪಾಸತೇ, (ತೇ) ಅಂಧಂ ತಮಃ ಪ್ರವಿಶಂತಿ ಯ ಉ ವಿದ್ಯಾಯಾಂ ರತಾಃ, ತೇ ತತಃ ಭೂಯಃ ಇವ ತಮಃ (ಪ್ರವಿಶಂತಿ).

೯. ಯೇ=ಯಾರು, ಅವಿದ್ಯಾಮ್=ಅವಿದ್ಯೆಯನ್ನು (ಲೌಕಿಕ ಕರ್ಮ ಜ್ಞಾನಗಳನ್ನು), ಉಪಾಸತೇ=ಉಪಾಸನೆ ಮಾಡುವರೋ, (ತೇ=ಅವರು), ಅಂಧಂ ತಮಃ=ಕಗ್ಗತ್ತಲೆ ಯನ್ನು, ಪ್ರವಿಶಂತಿ=ಪ್ರವೇಶಿಸುತ್ತಾರೆ, ಯ ಉ=ಯಾರು, ವಿದ್ಯಾಯಾಂ=ವಿದ್ಯೆಯಲ್ಲಿಯೆ (ಪರಮಾತ್ಮನ ವಿಷಯವಾದ ಅನುಸಂಧಾನದಲ್ಲಿಯೇ), ರತಾಃ=ನಿರತರಾಗಿರುವರೋ, ತೇ= ಅವರು, ತತಃ=ಅದಕ್ಕಿಂತ, ಭೂಯಃ ಇವ=ಹೆಚ್ಚಾದ, ತಮಃ=ಕತ್ತಲೆಯನ್ನು, (ಪ್ರವಿಶಂತಿ=ಪ್ರವೇಶಿಸುತ್ತಾರೆ).

೯. ಯಾರು ಲೌಕಿಕ ಕರ್ಮಜ್ಞಾನಗಳನ್ನೆ ಉಪಾಸನೆ ಮಾಡುವರೋ ಅವರು ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ.

ಯಾರು ಪರಮಾತ್ಮನ ಅನುಸಂಧಾನದಲ್ಲಿಯೆ ನಿರತರಾಗಿರುವರೋ ಅವರು ಇನ್ನೂ ಹೆಚ್ಚಿನ ಕಗ್ಗತ್ತಲೆಯನ್ನು ಪ್ರವೇಶಿಸುತ್ತಾರೆ.

ವಿದ್ಯೆ ಮತ್ತು ಅವಿದ್ಯೆಗಳು ಪರಮಾತ್ಮನಿಂದಲೇ ಬಂದವು. ಇವೆರಡನ್ನೂ ಜೀವನದಲ್ಲಿ ಸಮನ್ವಯಗೊಳಿಸುವುದೇ ಯುಕ್ತ ಮಾರ್ಗ. ಇವುಗಳಲ್ಲಿ ಯಾವುದಾದರೂ ಒಂದನ್ನೇ ಅನುಸರಿಸುವುದು ಜೀವನದ ಉದ್ದೇಶವಲ್ಲ. ಜೀವನ ಸುಂದರವಾಗಬೇಕಾದರೆ, ಆನಂದಮಯವಾಗಬೇಕಾದರೆ, ಪ್ರಚಂಡ ಕ್ರಿಯಾಶಕ್ತಿಯೊಡನೆ ಆತ್ಮಜ್ಞಾನದ ಸಂಗಮವಾಗಬೇಕು.

ಮಂತ್ರ ೧೦

ವಿದ್ಯೆಯ ಫಲ ಬೇರೆ, ಅವಿದ್ಯೆಯ ಫಲ ಬೇರೆ. ವಿದ್ಯೆಯಿಂದ ಆತ್ಮಾನಂದ. ಅವಿದ್ಯೆಯಿಂದ ಲೌಕಿಕ ಕ್ಷೇಮ. ಕರ್ಮದಿಂದ ಉತ್ಪತ್ತಿ; ಉತ್ಪತ್ತಿಯಿಂದ ಅರ್ಥಸಂಗ್ರಹ; ಅರ್ಥದಿಂದ ಲೌಕಿಕ ಕ್ಷೇಮ; ಲೌಕಿಕ ಕ್ಷೇಮದಿಂದ ಸಂತೋಷ; ಸಂತೋಷದಿಂದ ಆತ್ಮಸಾಧನೆ; ಆತ್ಮಸಾಧನೆಯಿಂದ ಆತ್ಮಾನಂದ. ಹೀಗೆ ಅವಿದ್ಯೆ, ಕಡೆಗೆ ವಿದ್ಯೆಯಲ್ಲಿ ಪೂರ್ಣವಾಗುತ್ತದೆ. ಈ ಕಾರಣದಿಂದ ಲೌಕಿಕ ಕರ್ಮಜ್ಞಾನಗಳು, ಆತ್ಮಸಾಧನೆಗೆ ವಿರೋಧಿಗಳೆಂದು ಭಾವಿಸಬಾರದು. ಸಿದ್ಧಿಗೆ ಬುನಾದಿಯೆ ಲೌಕಿಕ ಕರ್ಮ ಮತ್ತು ಲೌಕಿಕ ಜ್ಞಾನ.

ಅನ್ಯದೇವಾಹುರ್ವಿದ್ಯಯಾ-
ನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ
ಯೇ ನಸ್ತದ್ವಿಚಚಕ್ಷಿರೇ ॥ ೧೦ ॥

ವಿದ್ಯಯಾ ಅನ್ಯತ್ ಏವ ಆಹುಃ, ಅವಿದ್ಯಯಾ ಅನ್ಯತ್ ಆಹುಃ, ಯೇ ನಃ ತತ್ ವಿಚಚಕ್ಷಿರೇ, (ತೇಷಾಂ) ಧೀರಾಣಾಂ ಇತಿ ಶುಶ್ರುಮ.

ವಿದ್ಯಯಾ = ವಿದ್ಯೆಯಿಂದ, ಅನ್ಯತ್ ಏವ = ಬೇರೆಯೇ (ಫಲವೆಂದು), ಆಹುಃ – ಹೇಳುತ್ತಾರೆ, ಅವಿದ್ಯಯಾ – ಅವಿದ್ಯೆಯಿಂದ, ಅನ್ಯತ್ = ಬೇರೆ (ಫಲವೆಂದು), ಆಹುಃ = ಹೇಳುತ್ತಾರೆ, ಯೇ = ಯಾರು, ನಃ = ನಮಗೆ, ತತ್ = ಅದನ್ನು (ಅಜ್ಞಾನವನ್ನು), ವಿಚಚಕ್ಷಿರೇ = ವಿವರಿಸಿದರೋ, (ತೇಷಾಂ = ಅಂಥ), ಧೀರಾಣಾಂ = ಧೀರರಿಂದ, ಇತಿ = ಹೀಗೆ, ಶುಶ್ರುಮ = ಕೇಳಿದ್ದೇವೆ.

೧೦. ವಿದ್ಯೆಯ ಫಲ ಬೇರೆ, ಅವಿದ್ಯೆಯ ಫಲ ಬೇರೆಯೆಂದು ಹೇಳುತ್ತಾರೆ. ಈ ರೀತಿ ಹೇಳಿದವರು ಧೀರರು. ಅವರಿಂದ ಈ ನಿರೂಪಣೆಯನ್ನು ಕೇಳಿದ್ದೇವೆ.

ಉಪನಿಷತ್ತಿನ ಋಷಿಗಳ ಕಾಲಕ್ಕಾಗಲೆ ವಿದ್ಯೆ ಎಂದರೇನು? ಅವಿದ್ಯೆಯೆಂದರೇನು? ಎಂಬ ವಿಚಾರ ಪ್ರಚಲಿತವಾಗಿತ್ತು. ಧೀರರು ಎಂದರೆ ಧೀರರಾದ ಋಷಿಗಳೆಂದೇ ಅರ್ಥ. ಈ ಪ್ರಪಂಚದಲ್ಲಿ ಮಾನವರು ಅವಿದ್ಯೆಯ ಮೂಲಕವೇ ವಿದ್ಯೆಯನ್ನು ಪಡೆಯಬೇಕಾಗಿದೆ. ಆತ್ಮಾನುಭೂತಿಗೆ ಶರೀರ ಆವಶ್ಯಕ, ಶರೀರವಿರಬೇಕಾದರೆ ಅವಿದ್ಯೆಯ ನೆರವು ಬೇಕು. ಅವಿದ್ಯೆಯೆಂದರೆ ಲೌಕಿಕ ಕರ್ಮ ಮತ್ತು ಲೌಕಿಕ ಜ್ಞಾನ.

ಮಂತ್ರ ೧೧

ಅವಿದ್ಯೆಯನ್ನು ಯಾರೂ ತಿರಸ್ಕರಿಸುವಂತಿಲ್ಲ. ಮೃತ್ಯುವನ್ನು ದಾಟಿ ಆತ್ಮಾನುಭೂತಿ ಪಡೆಯಲು ಅವಿದ್ಯೆ ಅಸ್ತಿಭಾರವಿದ್ದಂತೆ.

ಲೌಕಿಕಜ್ಞಾನವು ಎಲ್ಲರಿಗೂ ಅವಶ್ಯಕ, ಆ ಜ್ಞಾನದ ಸೋಪಾನಗಳನ್ನೇರಿ ಆತ್ಮಾನುಭೂತಿಯ ಶೈಲಕ್ಕೇರಬೇಕು. ಉತ್ತಮ ಆಹಾರ, ಉತ್ತಮ ವಸತಿ, ದೊರಕಿದಾಗ ಆಧ್ಯಾತ್ಮಿಕ ಸಾಧನೆ ಸುಲಭವಾಗುತ್ತದೆ. ಆಧ್ಯಾತ್ಮಿಕ ಸಾಧನೆ, ವಿದ್ಯೆಯನ್ನು ಪಡೆಯಲು ಪ್ರೇರಕ. ವಿದ್ಯೆಯಿಂದ ಅಮೃತತ್ವ ಲಾಭ.

ವಿದ್ಯಾಂ ಚಾವಿದ್ಯಾಂ ಚ
ಯಸ್ತದ್ವೇದೋಭಯಗ್ಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ
ವಿದ್ಯಯಾಮೃತಮಶ್ನುತೇ ॥೧೧॥

ವಿದ್ಯಾಂ ಚ ಅವಿದ್ಯಾಂ ಚ ತತ್ ಉಭಯಂ ಸಹ ಯಃ ವೇದ, (ಸಃ), ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಂ ಅಶ್ನುತೇ.

ವಿದ್ಯಾಂ=ಆತ್ಮಸಾಧನೆಯನ್ನೂ, ಚ=ಮತ್ತು, ಅವಿದ್ಯಾಂ= ಲೌಕಿಕ ಕರ್ಮ ಮತ್ತು ಲೌಕಿಕ ಜ್ಞಾನವನ್ನೂ, ಚ=ಮತ್ತು, ತತ್=ಆ, ಉಭಯಂ ಸಹ=ಎರಡನ್ನೂ, ಯಃ=ಯಾರು, ವೇದ=ಅರಿಯುವನೋ, (ಸಃ=ಅವನು), ಅವಿದ್ಯಯಾ= ಲೌಕಿಕಕರ್ಮ ಹಾಗೂ ಲೌಕಿಕ ಜ್ಞಾನಗಳ ಮೂಲಕ, ಮೃತ್ಯುಂ=ಸಾವನ್ನು, ತೀರ್ತ್ವಾ=ದಾಟಿ, ವಿದ್ಯಾ=ಆತ್ಮಾನುಸಂಧಾನ ರೂಪವಾದ ಜ್ಞಾನದಿಂದ, ಅಮೃತಂ=ಅಮೃತತ್ವವನ್ನು, ಅಶ್ನುತೇ=ಪಡೆಯುತ್ತಾನೆ.

೧೧. ಆತ್ಮಸಾಧನೆಗೆ ಬೇಕಾದ ಸಾಧನೆ ಹಾಗೂ ಜ್ಞಾನವೆ ವಿದ್ಯೆ. ಲೌಕಿಕ ಸಾಧನೆಗೆ ಬೇಕಾದ ಕರ್ಮ ಹಾಗೂ ಜ್ಞಾನವೆ

ಅವಿದ್ಯೆ. ಇವೆರಡನ್ನೂ ಯಾರು ಅರಿಯುವನೋ, ಅವನು ಲೌಕಿಕ ರೂಪವಾದ ಅವಿದ್ಯೆಯ ಮೂಲಕ ಮೃತ್ಯುವನ್ನು ದಾಟಿ, ಆತ್ಮಸಾಧಕವಾದ ವಿದ್ಯೆಯ ಮೂಲಕ ಅಮೃತತ್ವವನ್ನು ಪಡೆಯುತ್ತಾನೆ.

ಇಂದು ಶಾಲೆಗಳಲ್ಲಿ ಕಾಲೇಜುಗಳಲ್ಲಿ ದೊರಕುವುದು ವಿದ್ಯೆಯಲ್ಲ, ಅವಿದ್ಯೆ. ಅವಿದ್ಯೆ ಎಂದರೆ ಲೌಕಿಕ ಜ್ಞಾನ. ಇಷ್ಟರಲ್ಲಿಯೇ ವಿದ್ಯಾಭ್ಯಾಸ ಮುಗಿಯಬಾರದು. ಆಧ್ಯಾತ್ಮಿಕ ಸಾಧನೆಗಾಗಿ, ನಮ್ಮ ವೇದೋಪನಿಷತ್ತುಗಳ ಕಿಂಚಿತ್ ಜ್ಞಾನವಾದರೂ ನಮ್ಮ ವಿದ್ಯಾರ್ಥಿಗಳಿಗೆ ಅವಶ್ಯಕ. ಆಧ್ಯಾತ್ಮ, ಲೌಕಿಕ-ಎರಡನ್ನೂ ಪ್ರತಿವ್ಯಕ್ತಿಯೂ ತಿಳಿಯಬೇಕಾದುದು ಅವಶ್ಯಕ.

ಮಂತ್ರ ೧೨

ಸಂಭೂತಿ ಮತ್ತು ಅಸಂಭೂತಿ-ಇವೆರಡೂ ಪರಮಾತ್ಮನ ಶಕ್ತಿಗಳು. ಸಂಭೂತಿ ಎಂದರೆ ವ್ಯಕ್ತ ಜಗತ್ತು. ಅಸಂಭೂತಿ ಎಂದರೆ ಪರಮಾತ್ಮನ ನಿರ್ಗುಣ ಸ್ವರೂಪ, ಅವ್ಯಕ್ತ ಸ್ವರೂಪ. ಸಂಭೂತಿ ಮತ್ತು ಅಸಂಭೂತಿ-ಎರಡು ಪದಗಳ ಅರ್ಥವನ್ನು ಹಲವರು ಹಲವು ರೀತಿಯಲ್ಲಿ ನಿರ್ಣಯಿಸಿದ್ದಾರೆ. ಕೆಲವರ ಅಭಿಪ್ರಾಯಗಳು ಹೀಗಿವೆ:

1. ವಿನೋಬಾ ಭಾವೆ:
   ಸಂಭೂತಿ ಎಂದರೆ ನಿರೋಧ, ಅಸಂಭೂತಿ ಎಂದರೆ ವಿಕಾಸ.
2. ಡಿ.ವಿ. ಗುಂಡಪ್ಪ:
   ಸಂಭೂತಿ ಎಂದರೆ ಬ್ರಹ್ಮ, ಅಸಂಭೂತಿ ಎಂದರೆ ಪ್ರಪಂಚ.

3. ಸ್ವಾಮಿ ಆದಿದೇವಾನಂದ :
ಸಂಭೂತಿ ಎಂದರೆ ಕಾರ್ಯಬ್ರಹ್ಮ, ಅಸಂಭೂತಿ ಎಂದರೆ ಪ್ರಕೃತಿ, ಅವಿದ್ಯೆ. ಈ ವಿವರ ಶಂಕರ ಭಾಷ್ಯದಲ್ಲಿದೆ.

4. ಪ್ರೊ॥ ಎಂ. ಹಿರಿಯಣ್ಣ :
ಸಂಭೂತಿ ಎಂದರೆ ವ್ಯಕ್ತ, ಅಸಂಭೂತಿ ಎಂದರೆ ಅವ್ಯಕ್ತ ಎಂಬ ಪ್ರೊ॥ ಎಂ. ಹಿರಿಯಣ್ಣನವರ ಅರ್ಥ ನಿರ್ಣಯವನ್ನೇ ಇಲ್ಲಿ ಇಟ್ಟುಕೊಂಡಿದೆ.

ಅಂಧಂ ತಮಃ ಪ್ರವಿಶಂತಿ
ಯೇಽಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ
ಯ ಉ ಸಂಭೂತ್ಯಾಗ್ಂ ರತಾಃ ॥೧೨॥

ಯೇ ಅಸಂಭೂತಿಂ ಉಪಾಸತೇ (ತೇ) ಅಂಧಂ ತಮಃ ಪ್ರವಿಶಂತಿ ಯೇ ಉ ಸಂಭೂತ್ಯಾಂ ರತಾಃ (ತೇ) ತತಃ ಭೂಯಃ ಇವ ತಮಃ (ಪ್ರವಿಶಂತಿ).

ಯೇ = ಯಾರು, ಅಸಂಭೂತಿಂ = ಅವ್ಯಕ್ತವನ್ನು, ಉಪಾಸತೇ=ಉಪಾಸನೆ ಮಾಡುವರೋ, (ತೇ=ಅವರು), ಅಂಧಂ ತಮಃ=ಕಗ್ಗತ್ತಲೆಯನ್ನು, ಪ್ರವಿಶಂತಿ=ಪ್ರವೇಶಿಸುತ್ತಾರೆ. ಯೇ ಉ=ಯಾರು, ಸಂಭೂತ್ಯಾಂ=ವ್ಯಕ್ತದಲ್ಲಿ, ರತಾಃ= ಆಸಕ್ತರೋ, (ತೇ=ಅವರು), ತತಃ=ಅದಕ್ಕಿಂತ, ಭೂಯಃ ಇವ=ಹೆಚ್ಚಾದ, ತಮಃ=ಕತ್ತಲೆಯನ್ನು (ಪ್ರವಿಶಂತಿ =ಪ್ರವೇಶಿಸುತ್ತಾರೆ).

೧೨. ಅವ್ಯಕ್ತವನ್ನೇ ಉಪಾಸನೆ ಮಾಡುವವರು ಕತ್ತಲೆಯನ್ನು ಪ್ರವೇಶಿಸುತ್ತಾರೆ. ವ್ಯಕ್ತದಲ್ಲಿಯೆ ಆಸಕ್ತರಾದವರು, ಅದಕ್ಕಿಂತ ಭಯಂಕರವಾದ ಕತ್ತಲೆಯನ್ನು ಪ್ರವೇಶಿಸುತ್ತಾರೆ.

ವ್ಯಕ್ತ ಹಾಗೂ ಅವ್ಯಕ್ತ–ಎರಡೂ ಪರಮಾತ್ಮನ ಸ್ವರೂಪವೇ. ಎರಡನ್ನೂ ಗ್ರಹಿಸಬೇಕು. ಒಂದನ್ನು ಮಾತ್ರ ಪುರಸ್ಕರಿಸುವುದು ಖಂಡ ದೃಷ್ಟಿ. ಎರಡನ್ನೂ ಪುರಸ್ಕರಿಸುವುದು ಅಖಂಡ ದೃಷ್ಟಿ.

ಮಂತ್ರ ೧೩

ಅವ್ಯಕ್ತವು ಸೃಷ್ಟಿ–ಪೂರ್ವಸ್ಥಿತಿ, ವ್ಯಕ್ತವು ಸೃಷ್ಟಿ. ಅವ್ಯಕ್ತವು ನಿರ್ಗುಣ. ವ್ಯಕ್ತವು ಸಗುಣ. ಅವ್ಯಕ್ತವನ್ನು ಉಪಾಸನೆ ಮಾಡಿದರೆ ದೊರಕುವ ಫಲವೇ ಬೇರೆ. ವ್ಯಕ್ತವನ್ನು ಉಪಾಸನೆ ಮಾಡಿದರೆ ಬರುವ ಫಲವೇ ಬೇರೆ. ಪ್ರಾಚೀನ ಕಾಲದಿಂದಲೂ ಧೀರರಾದ ಋಷಿಗಳು ಈ ಅನುಭವವನ್ನು ಹೇಳುತ್ತಲೆ ಬಂದಿರುವುದನ್ನು ಈ ಉಪನಿಷತ್ತು ಸ್ಮರಿಸಿದೆ.

ಅನ್ಯದೇವಾಹುಃ ಸಂಭವಾ
ದನ್ಯದಾಹುರಸಂಭವಾತ್।
ಇತಿ ಶುಶ್ರುಮ ಧೀರಾಣಾಂ
ಯೇ ನಸ್ತದ್ವಿಚಚಕ್ಷಿರೇ ॥೧೩॥

ಸಂಭವಾತ್ ಅನ್ಯತ್ ಏವ ಆಹುಃ, ಅಸಂಭವಾತ್ ಅನ್ಯತ್ ಆಹುಃ, ಯೇ ನಃ ತತ್ ವಿಚಚಕ್ಷಿರೇ (ತೇಷಾಂ) ಧೀರಾಣಾಂ ಇತಿ ಶುಶ್ರುಮ.

ಸಂಭವಾತ್=ವ್ಯಕ್ತದಿಂದ, ಅನ್ಯತ್ ಏವ=ಬೇರೆಯೆಂದು ಆಹುಃ = ಹೇಳುತ್ತಾರೆ, ಅಸಂಭವಾತ್ = ಅವ್ಯಕ್ತದಿಂದ,

ಅನ್ಯತ್ = ಬೇರೆಯೆಂದು, ಆಹುಃ = ಹೇಳುತ್ತಾರೆ, ಯೇ = ಯಾರು, ನಃ = ನಮಗೆ, ತತ್ = ಅದನ್ನು, ವಿಚಚಕ್ಷಿರೇ = ವಿವರಿಸಿದರೋ, (ತೇಷಾಂ = ಅಂತಹ), ಧೀರಾಣಾಂ = ಧೀರರಿಂದ, ಇತಿ = ಹೀಗೆ, ಶುಶ್ರುಮ = ಕೇಳಿದ್ದೇವೆ.

೧೩. ವ್ಯಕ್ತದಿಂದ ದೊರಕುವ ಫಲ ಬೇರೆ. ಅವ್ಯಕ್ತದಿಂದ ದೊರಕುವ ಫಲ ಬೇರೆ. ಧೀರರು ಹೀಗೆ ವಿವರಿಸಿದ್ದನ್ನು ಕೇಳಿದ್ದೇವೆ.

ಮಂತ್ರ ೧೪

ಸಂಭೂತಿಂ ಚ ವಿನಾಶಂ ಚ
ಯಸ್ತದ್ವೇದೋಭಯುಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ
ಸಂಭೂತ್ಯಾಽಮೃತಮಶ್ನುತೇ ॥೧೪॥

ಸಂಭೂತಿಂ ಚ ವಿನಾಶಂ ಚ ತತ್ ಉಭಯಂ ಸಹ, ಯಃ ವೇದ, (ಸಃ), ವಿನಾಶೇನ ಮೃತ್ಯುಂ ತೀರ್ತ್ವಾ, ಸಂಭೂತ್ಯಾ ಅಮೃತಂ ಅಶ್ನುತೇ.

ಸಂಭೂತಿಂ = ಪರಮಾತ್ಮನ ವ್ಯಕ್ತರೂಪವಾದ ಈ ಜಗತ್ತನ್ನೂ, ಚ = ಮತ್ತು ವಿನಾಶಂ = ಜಗತ್ತಿನ ವಿನಾಶದ ಆಚೆ ಇರುವ ಪರಮಾತ್ಮನ ಅವ್ಯಕ್ತ ಸ್ವರೂಪವನ್ನೂ, ಚ = ಮತ್ತು, ತತ್ ಉಭಯಂ ಸಹ = ಆ ಎರಡನ್ನೂ ಒಟ್ಟಿಗೆ, ಯಃ = ಯಾರು, ವೇದ = ಅರಿಯುವನೋ, (ಸಃ = ಅವನು), ವಿನಾಶೇನ = ಪರಮಾತ್ಮನ ಅವ್ಯಕ್ತ ಸ್ವರೂಪವನ್ನು ತಿಳಿಯುವುದರ ಮೂಲಕ, ಮೃತ್ಯುಂ = ಮೃತ್ಯುವನ್ನು, ತೀರ್ತ್ವಾ = ದಾಟಿ, ಸಂಭೂತ್ಯಾ =

ವ್ಯಕ್ತ ರೂಪವಾದ ಈ ಜಗತ್ತಿನ ಮೂಲಕ, ಅಮೃತಂ= ಅಮೃತವನ್ನು, ಅಶ್ನುತೇ=ಪಡೆಯುತ್ತಾನೆ.

೧೪. ವ್ಯಕ್ತ ರೂಪವಾದ ಜಗತ್ತು, ವಿನಾಶದ ಹಿಂದಿರುವ ಪರಮಾತ್ಮನ ಅವ್ಯಕ್ತ ಸ್ವರೂಪ, ಇವೆರಡನ್ನೂ ಒಟ್ಟಿಗೆ ಅರಿಯುವವನು, ವಿನಾಶದ ಜ್ಞಾನದಿಂದ ಅಂದರೆ ಪರಮಾತ್ಮನ ಅವ್ಯಕ್ತ ಸ್ವರೂಪದ ಜ್ಞಾನದಿಂದ ಮೃತ್ಯುವನ್ನು ದಾಟಿ, ವ್ಯಕ್ತರೂಪವಾದ ಜಗತ್ತಿನ ಜ್ಞಾನದ ಮೂಲಕ, ಅಮೃತವನ್ನು ಪಡೆಯುತ್ತಾನೆ.

ಪರಮಾತ್ಮನ ವ್ಯಕ್ತರೂಪವೇ ಈ ಜಗತ್ತು. ಈ ಜಗತ್ತನ್ನು ಯಾರೂ ಉಪೇಕ್ಷೆ ಮಾಡಬಾರದು. ಈ ಜಗತ್ತಿನಲ್ಲಿ ಬದುಕಿಯೇ ಅಮೃತವನ್ನು ಪಡೆಯುವುದು. ಅಮೃತವೆಂದರೆ ಆತ್ಮಸಾಕ್ಷಾತ್ಕಾರ. ಪರಮಾತ್ಮನ ಅವ್ಯಕ್ತ ಸ್ವರೂಪವನ್ನು ತಿಳಿಯುವುದೆಂದರೆ, ಪರಮಾತ್ಮನ ಇನ್ನೊಂದು ಶಕ್ತಿಯ ಪರಿಜ್ಞಾನ. ಉಪನಿಷತ್ತಿನ ಋಷಿಯ ಆದೇಶದಂತೆ, ಎಲ್ಲರೂ ವ್ಯಕ್ತ ಹಾಗೂ ಅವ್ಯಕ್ತಗಳೆರಡರ ಜ್ಞಾನ ಪಡೆಯಬೇಕು.

ಮಂತ್ರ ೧೫

ಮೊದಲ ಹದಿನಾಲ್ಕು ಮಂತ್ರಗಳಲ್ಲಿ ಪರಮಾತ್ಮನು ಎಲ್ಲೆಡೆಯೂ ವ್ಯಾಪಿಸಿರುವ ವಿಚಾರ ನಿರೂಪಿತವಾಗಿದೆ. ವಿದ್ಯೆ, ಅವಿದ್ಯೆ; ಸಂಭೂತಿ, ಅಸಂಭೂತಿಗಳ ಸ್ವರೂಪದ ವಿವರಣೆ ಬಂದಿದೆ. ಮುಂದಿನ ನಾಲ್ಕು ಮಂತ್ರಗಳು ಪ್ರಾರ್ಥನಾ ರೂಪವಾಗಿವೆ. ಈ ಲೋಕದ ಹಣ, ಕಾಮನೆ, ಸ್ತ್ರೀಪುರುಷರು, ಭೋಗೋಪಕರಣಗಳು—ಇವೆಲ್ಲ ಚಿನ್ನದ ಮುಚ್ಚಳದಂತೆ ಆಕರ್ಷಣೀಯ, ಸತ್ಯಧರ್ಮಾಪೇಕ್ಷಿಗಳಾದ ಸಾಧಕರು, ಈ

ಆಕರ್ಷಣೀಯ ಚಿನ್ನದ ಮುಚ್ಚಳದ ಆಚೆಗಿರುವ ಪರಮ ಸತ್ಯ ದರ್ಶನಕ್ಕಾಗಿ ಪ್ರಾರ್ಥಿಸುತ್ತಾರೆ.

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ ॥ ೧೫ ॥

ಹಿರಣ್ಮಯೇನ ಪಾತ್ರೇಣ ಸತ್ಯಸ್ಯ ಮುಖಂ ಅಪಿಹಿತಂ. ಸತ್ಯಧರ್ಮಾಯ ದೃಷ್ಟಯೇ, ಪೂಷನ್ ತ್ವಂ ತತ್ ಅಪಾವೃಣು.

ಹಿರಣ್ಮಯೇನ=ಚಿನ್ನದ, ಪಾತ್ರೇಣ=ಮುಚ್ಚಳದಿಂದ, ಸತ್ಯಸ್ಯ=ಸತ್ಯದ, ಮುಖಂ=ಮುಖವು, ಅಪಿಹಿತಂ=ಮುಚ್ಚಿದೆ, ಸತ್ಯಧರ್ಮಾಯ=ಸತ್ಯಧರ್ಮಾಪೇಕ್ಷಿಯಾದ (ನನಗೆ), ದೃಷ್ಟಯೇ=ನೋಡಲು, ಪೂಷನ್ ತ್ವಂ=ವಿಶ್ವಪೋಷಕ ಪರಮಾತ್ಮನಾದ ನೀನು, ತತ್=ಅದನ್ನು, ಅಪಾವೃಣು= ತೆಗೆದು ಹಾಕು.

೧೫. ವಿಶ್ವಪೋಷಕನಾದ ಪರಮಾತ್ಮನೆ, ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಿದೆ. ಸತ್ಯಧರ್ಮಾಪೇಕ್ಷಿಯಾದ ನನಗೆ ಆ ಸತ್ಯ ಸಾಕ್ಷಾತ್ಕಾರವಾಗಲು, ಆ ಮುಚ್ಚಳವನ್ನು ತೆಗೆದು ಹಾಕು.

ವಿಶ್ವದ ಹೊರನೋಟ, ಬಾಹ್ಯ ರೂಪವೇ ಪರಮ ಸತ್ಯವಲ್ಲ. ಅದರ ಹಿಂದಿರುವ ಶಕ್ತಿಯಾವುದು?—ಎಂಬ ಪ್ರಶ್ನೆ ಪ್ರಾಚೀನ ಋಷಿಗಳ ಮನಸ್ಸಿನಲ್ಲಿ ಉದಯುವಾಗಿ, ವಿಶ್ವದ ಹಿಂದಿರುವ ಶಾಶ್ವತ ಸತ್ಯವಾವುದು—ಎಂಬುದನ್ನು ತಿಳಿಯಲು ಪರಮಾತ್ಮ

ನನ್ನು ಪ್ರಾರ್ಥಿಸಿದರು. ಆ ಪರಮ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಅವರು ಧ್ಯಾನಿಸಿದರು.

ಮಂತ್ರ ೧೬

ಪರಮಾತ್ಮ, ಆತ್ಮ–ಈ ಎರಡು ಶಕ್ತಿಗಳ ಅರಿವೇ ಸಾಕ್ಷಾತ್ಕಾರ. ಪರಮಾತ್ಮ ಮತ್ತು ಆತ್ಮ ಇವೆರಡೂ ಬೇರೆಯಲ್ಲ ಎಂಬ ಅನುಭವವಾಗುತ್ತದೆ, 'ಸೋಽಹಮಸ್ಮಿ'– 'ಅವನೇ ನಾನು'–ಎಂಬ ಪರಮ ರಹಸ್ಯದ ಅರಿವಾದಾಗ!

ಪೂಷನ್ನೇಕರ್ಷೇ ಯಮ ಸೂರ್ಯ
ಪ್ರಾಜಾಪತ್ಯ ವ್ಯೂಹ ರಶ್ಮೀನ್ ಸಮೂಹ।
ತೇಜೋ ಯತ್ತೇ ರೂಪಂ ಕಲ್ಯಾಣತಮಂ
·ತತ್ತೇ ಪಶ್ಯಾಮಿ
ಯೋಽಸಾವಸೌ ಪುರುಷಃ ಸೋಽಹಮಸ್ಮಿ
॥೧೬॥

ಪೂಷನ್ ಏಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ತೇ ರಶ್ಮೀನ್ ವ್ಯೂಹ ತೇಜಃ ಸಮೂಹ, ತೇ ಯತ್ ಕಲ್ಯಾಣತಮಂ ತತ್ ರೂಪಂ ಪಶ್ಯಾಮಿ, ಅಸೌ ಅಸೌ ಪುರುಷಃ ಯಃ ಸಃ ಅಹಂ ಅಸ್ಮಿ.

ಪೂಷನ್=ವಿಶ್ವಪೋಷಕ ಪರಮಾತ್ಮನೆ, ಏಕರ್ಷೇ= ಏಕಾಂಗಿಯಾಗಿ ಸಂಚರಿಸುವವನೆ, ಯಮ=ವಿಶ್ವನಿಯಂತ್ರಕನೆ, ಸೂರ್ಯ = ದಿವ್ಯಜ್ಯೋತಿಯೆ, ಪ್ರಾಜಾಪತ್ಯ = ವಿಶ್ವಪಿತನೆ, ತೇ=ನಿನ್ನ, ರಶ್ಮೀನ್=ಕಿರಣಗಳನ್ನು, ವ್ಯೂಹ–ಸುವಿನ್ಯಾಸ ಗೊಳಿಸು, ತೇಜಃ=ತೇಜಸ್ಸನ್ನು, ಸಮೂಹ=ಸೆಳೆದುಕೋ,

ತೇ=ನಿನ್ನ, ಯತ್=ಯಾವ, ಕಲ್ಯಾಣತಮಂ=ಮಂಗಳಕರ
ವಾದ, ತತ್=ಆ, ರೂಪಂ=ರೂಪವನ್ನು, ಪಶ್ಯಾಮಿ=ನೋಡು
ತ್ತೇನೆ, ಅಸೌ=ಆ, ಅಸೌ ಪುರುಷಃ=ಆ ಪುರುಷನು, ಅಹಂ
ಅಸ್ಮಿ=ನಾನಾಗಿದ್ದೇನೆ.

೧೬. ವಿಶ್ವಪೋಷಕನೆ, ಏಕಾಂಗಿಯಾಗಿ ಸಂಚರಿಸು ವವನೆ, ವಿಶ್ವನಿಯಂತ್ರಕನೆ, ದಿವ್ಯಜ್ಯೋತಿಯೆ, ವಿಶ್ವಪಿತನೆ, ನಿನ್ನ ಕಿರಣಗಳನ್ನು ಸುವಿನ್ಯಾಸಗೊಳಿಸು, ನಿನ್ನ ತೇಜಸ್ಸನ್ನು ಸೆಳೆದುಕೋ. ನಿನ್ನ ಮಂಗಳಕರ ರೂಪವನ್ನು ನೋಡುತ್ತೇನೆ. ಅದೋ ಆ ಪುರುಷನೇ ನಾನು!

ಸಾಧಕರಿಗೆ ಕಡೆಯಲ್ಲಿ ಆಗುವ ಸಾಕ್ಷಾತ್ಕಾರದ ಹಿರಿಮೆ ಈ ಮಂತ್ರದಲ್ಲಿ ನಿರೂಪಿತವಾಗಿದೆ. ಪರಮಾತ್ಮನನ್ನು ವಿಶ್ವ ಪೋಷಕ, ಏಕಾಂಗಿಯಾಗಿ ಸಂಚರಿಸುವವನು, ವಿಶ್ವನಿಯಂತ್ರಕ ನಾದ ಯಮ, ವಿಶ್ವಪಿತನಾದ ಪ್ರಜಾಪತಿ, ಜ್ಯೋತಿ ಸ್ವರೂಪ ನಾದ ಸೂರ್ಯ—ಎಂದು ಹಲವು ಪ್ರತಿಮೆಗಳ ಮೂಲಕ ಸಂಬೋಧಿಸಿ, ಕಡೆಗೆ ಸರ್ವಶಕ್ತಿವಾನ್ ಪರಮಾತ್ಮನೇ ನಾನು— ಎಂಬ ಅನುಭೂತಿ ಈ ಮಂತ್ರದಲ್ಲಿ ನಿರೂಪಿತವಾಗಿದೆ. ಯಮ ನೆಂದರೆ ಮೃತ್ಯುದೇವತೆ ಎಂಬುದು ಸಾಮಾನ್ಯ ಅರ್ಥ. ಯಮ ನೆಂದರೆ ಜಗನ್ನಿಯಂತ್ರಕ ಶಕ್ತಿ. ಪ್ರಜಾಪತಿ ಎಂದರೆ ವಿಶ್ವಪಿತ. ಅವನು ಸಕಲ ಜೀವರಾಶಿಗಳ ತಂದೆ. ಅವನೇ ಸೃಷ್ಟಿಕರ್ತ. ಸೂರ್ಯನು ಬೆಳಕಿನ ಪ್ರತಿನಿಧಿ. ಆ ಬೆಳಕೇ ಜ್ಞಾನಜ್ಯೋತಿ. ಯಮ, ಪ್ರಜಾಪತಿ, ಸೂರ್ಯ—ಈ ಪ್ರತಿಮೆಗಳ ಮೂಲಕ ಪರಮಾತ್ಮನ ಸ್ವರೂಪವನ್ನು ವರ್ಣಿಸಲು ಋಷಿ-ಪ್ರತಿಭೆ ಯತ್ನಿಸಿದೆ. ಜ್ಯೋತಿಸ್ವರೂಪನಾದ ಪರಮಾತ್ಮನ ಸಾಕ್ಷಾತ್ಕಾ

ವಾಗಲು, ಆವನ ಮಂಗಳಕರ ರೂಪವನ್ನು ಕಾಣಲು ಇಚ್ಛಿಸಿದ ಋಷಿಯು ಪ್ರಾರ್ಥನೆ ಈ ಮಂತ್ರದಲ್ಲಿದೆ. ಕಡೆಗೆ, "ಆ ಪುರುಷನೇ ನಾನು"—ಎಂಬ ಮಹದನುಭೂತಿ! ಪರಮಾತ್ಮ, ಆತ್ಮ—ಬೇರೆಯಲ್ಲ, ಒಂದೇ!—ಎಂಬ ಸಾಕ್ಷಾತ್ಕಾರ.

ಮಂತ್ರ ೧೭

ವಿವೇಕಿಗಳು ತಮ್ಮ ಪರೀಕ್ಷೆಯನ್ನು ಆಗಾಗ ಮಾಡಿಕೊಳ್ಳುತ್ತಿರಬೇಕು. ಇಚ್ಛಾಶಕ್ತಿರೂಪವಾದ ಕ್ರತುಶಕ್ತಿಯಿಂದ ಮತ್ತೆ ಮತ್ತೆ ಸನ್ಮಾರ್ಗದೆಡೆಗೆ ಮುನ್ನಡೆಯಲು ಯತ್ನಿಸಬೇಕು. ಈ ಪರೀಕ್ಷೆ ಮತ್ತು ಸಾಧನೆ ನಿರಂತರವಾಗಿರಬೇಕು.

ವಾಯುರನಿಲಮಮೃತ-
ಮಥೇದಂ ಭಸ್ಮಾಂತಗ್ಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಗ್ಂ ಸ್ಮರ
ಕ್ರತೋ ಸ್ಮರ ಕೃತಗ್ಂ ಸ್ಮರ ॥೧೭॥

ವಾಯುಃ ಅನಿಲಂ ಅಮೃತಂ, ಅಥ ಇದಂ ಶರೀರಂ ಭಸ್ಮಾಂತಂ, ಓಂ ಕ್ರತೋ ಸ್ಮರ, ಕೃತಗ್ಂ ಸ್ಮರ, ಕ್ರತೋ ಸ್ಮರ, ಕೃತಗ್ಂ ಸ್ಮರ.

ವಾಯುಃ=ಪ್ರಾಣಶಕ್ತಿರೂಪವಾದ, ಅನಿಲಂ=ಗಾಳಿಯು, ಅಮೃತಂ=ಅಮೃತಸ್ವರೂಪವು, ಅಥ=ಈಗ, ಇದಂ=ಈ, ಶರೀರಂ = ಶರೀರವು, ಭಸ್ಮಾಂತಂ = ಬೂದಿಯಾಗುವಂಥದು, ಓಂ = ಓಂ, ಕ್ರತೋ = ಇಚ್ಛಾಶಕ್ತಿಯೆ, ಸ್ಮರ = ಸ್ಮರಿಸು, ಕೃತಗ್ಂ=ಮಾಡಿದುದನ್ನು ಸ್ಮರ=ಸ್ಮರಿಸು, ಕ್ರತೋ=ಇಚ್ಛಾಶಕ್ತಿಯೆ, ಸ್ಮರ = ಸ್ಮರಿಸು, ಕೃತಗ್ಂ = ಮಾಡಿದುದನ್ನು, ಸ್ಮರ=ಸ್ಮರಿಸು.

೧೭. ಪ್ರಾಣಶಕ್ತಿರೂಪವಾದ ಗಾಳಿಯು ಅಮೃತ ಸ್ವರೂಪ. ಈ ಶರೀರ ಬೂದಿಯಾಗುವಂಥದು. ಇಚ್ಛಾಶಕ್ತಿಯೆ, ಸ್ಮರಿಸು; ಇದುವರೆಗೆ ನಡೆದುದನ್ನು ಸ್ಮರಿಸು; ಇಚ್ಛಾಶಕ್ತಿಯೆ, ಸ್ಮರಿಸು; ಇದುವರೆಗೆ ನಡೆದುದನ್ನು ಸ್ಮರಿಸು ಓಂ.

ಓಂ ಎಂಬುದು ಅನಂತಕಲ್ಯಾಣ ಗುಣಪರಿಪೂರ್ಣನಾದ ಪರಮಾತ್ಮನನ್ನು ಪ್ರತಿನಿಧಿಸುವ ಶಬ್ದ. ಪರಮಾತ್ಮನನ್ನು ಶಬ್ದ ರೂಪವಾಗಿ ನೆನೆಯುವಾಗ ಋಷಿಗಳು ಓಂಕಾರವನ್ನು ಬಳಸುತ್ತಾರೆ. ಓಂಕಾರವು ಶಬ್ದಬ್ರಹ್ಮವೆಂದು ಪೂಜ್ಯತೆ ಪಡೆದಿದೆ.

ಗಾಳಿ, ಪ್ರಾಣರೂಪವಾಗಿ ಬದುಕಿಗೆ ಆಶ್ರಯವಾಗಿರುತ್ತದೆ. ಉಸಿರಾಡುವುದು ನಿಂತರೆ ಮೃತ್ಯು. ಗಾಳಿಯಿಂದ ಪ್ರಾಣ. ಅದು ಅಮೃತ ಸ್ವರೂಪ. ಉಸಿರಾಡುವುದು ನಿಂತಾಗ ಶರೀರ ಶವ ವಾಗುತ್ತದೆ. ಶವಕ್ಕೆ ಆಗುವುದು ಅಗ್ನಿಸಂಸ್ಕಾರ. ಅದರಿಂದ ಶರೀರ ಭಸ್ಮವಾಗುತ್ತದೆ. ಪ್ರಾಣವಾಯುವೆಂದರೆ ಮಾತರಿಶ್ವಾ. ಮಾತರಿಶ್ವಾ ಎಂದರೆ, ವಿಶ್ವಕ್ರಿಯೆಯ ಕೇಂದ್ರವಾದ ದಿವ್ಯಜೀವನ ಶಕ್ತಿ. ಅದು ಅಮೃತ. ಅದಕ್ಕೆ ಸಾವಿಲ್ಲ. ಸಾವಿರುವುದು ಶರೀರಕ್ಕೆ. ಶರೀರ ಭಸ್ಮವಾಗಿ ಅಂತ್ಯವಾಗುತ್ತದೆ.

ಪ್ರತಿಯೊಬ್ಬರೂ ತಮ್ಮನ್ನು ಪರೀಕ್ಷಿಸುತ್ತ, ತಮ್ಮ ಬದುಕಿನ ಓರೆಕೋರೆಗಳನ್ನು ತಿದ್ದಿಕೊಂಡು, ಮುಂದೆ ಆಗಬೇಕಾದುದನ್ನು ಇಚ್ಛಿಸಬೇಕು. ಸಮಸ್ತ ಜೀವನವನ್ನು ಸಮೀಕ್ಷಿಸಿ, ಮಾಡ ಬೇಕಾದುದನ್ನು ನೆನೆದು ಕೃತ ಸಂಕಲ್ಪರಾಗಬೇಕು.

ಮಂತ್ರ ೧೮

ನಮ್ಮಲ್ಲಿರುವ ಇಚ್ಛಾಶಕ್ತಿಯನ್ನೇ ಕ್ರತು, ಅಗ್ನಿ–ಎಂದು ಕರೆದಿರುವುದು. ಅದೇ ಆತ್ಮ. ಉಪನಿಷತ್ತಿನ ಕಡೆಯಲ್ಲಿ ಬರುವ

ಈ ಮಂತ್ರವು ಅಗ್ನಿಯನ್ನು ಸಂಬೋಧಿಸಿ ಮಾಡಿದ ಪ್ರಾರ್ಥನಾ ರೂಪವಾಗಿದೆ.

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾಗಿ ವಿದ್ವಾನ್।
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮ ಉಕ್ತಿಂ
ವಿಧೇಮ ॥೧೮॥

ಅಗ್ನೇ ರಾಯೇ ಅಸ್ಮಾನ್ ಸುಪಥಾ ನಯ, ದೇವ ವಿಶ್ವಾನಿ ವಯುನಾನಿ ವಿದ್ವಾನ್, ಅಸ್ಮತ್ ಜುಹುರಾಣಂ ಏನಃ ಯುಯೋಧಿ; ತೇ ಭೂಯಿಷ್ಠಾಂ ನಮ ಉಕ್ತಿಂ ವಿಧೇಮ.

ಅಗ್ನೇ=ಅಗ್ನಿಯೆ, ರಾಯೇ=ಆಧ್ಯಾತ್ಮಿಕ ಐಶ್ವರ್ಯಕ್ಕಾಗಿ, ಅಸ್ಮಾನ್=ನಮ್ಮನ್ನು, ಸುಪಥಾ=ಸನ್ಮಾರ್ಗದಲ್ಲಿ, ನಯ=ಕರೆದುಕೊಂಡು ಹೋಗು, ದೇವ=ದೇವನಾದ ಅಗ್ನಿಯೆ, ವಿಶ್ವಾನಿ=ಸರ್ವ, ವಯುನಾನಿ=ಕರ್ಮಗಳನ್ನು, ವಿದ್ವಾನ್=ತಿಳಿದವನು. ಅಸ್ಮತ್=ನಮ್ಮ, ಜುಹುರಾಣಂ=ಕುಟಿಲವಾದ, ಏನಃ=ಪಾಪವನ್ನು, ಯುಯೋಧಿ=ಹೋಗಲಾಡಿಸು, ತೇ=ನಿನಗೆ, ಭೂಯಿಷ್ಠಾಮ್=ಅನೇಕ, ನಮಉಕ್ತಿಂ=ನಮಸ್ಕಾರದ ಮಾತನ್ನು, ವಿಧೇಮ=ಹೇಳುತ್ತೇವೆ.

೧೮. ದೇವದೇವನಾದ ಸಕಲ ಕರ್ಮರಹಸ್ಯಗಳನ್ನು ತಿಳಿದ ಅಗ್ನಿಯೆ, ಆಧ್ಯಾತ್ಮಿಕ ಐಶ್ವರ್ಯಗಳನ್ನು ಪಡೆಯಲು ನಮ್ಮನ್ನು ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗು. ಕುಟಿಲ ಪಾಪದಿಂದ ನಮ್ಮನ್ನು ಬಿಡುಗಡೆ ಮಾಡು. ನಿನಗೆ ಅನಂತ ನಮಸ್ಕಾರಗಳು.

ಅಗ್ನಿಗೆ ವೇದದಲ್ಲಿ ವಿಶೇಷ ಸ್ಥಾನ. ಸಂಕಲ್ಪ ಸಾಮರ್ಥ್ಯ

ವುಳ್ಳ ಕ್ರತುಶಕ್ತಿ ಅವನು. ಅವನೇ ನಮ್ಮ ಆತ್ಮ. ಚಿದಗ್ನಿ ಪ್ರಜ್ವಲಿಸದಿದ್ದರೆ, ಕಣ್ಣಿದ್ದೂ ಕತ್ತಲಲ್ಲಿ ಬದುಕಬೇಕಾಗುತ್ತದೆ. ಜ್ಞಾನ ಮತ್ತು ಶಕ್ತಿಯ ಪ್ರತಿನಿಧಿಯೇ ಅಗ್ನಿ. ಅಂಥ ಅಗ್ನಿಯನ್ನು ಕುರಿತ ಪ್ರಾರ್ಥನೆಯೇ ಈ ಮಂತ್ರ. ಈ ಅಗ್ನಿ ನಮ್ಮಲ್ಲಿ ಬೆಳಗಿದರೆ, ಪಾಪದಿಂದ ಮುಕ್ತರಾಗಿ, ಸನ್ಮಾರ್ಗದಲ್ಲಿ ಮುನ್ನಡೆದು ಆನಂದಮಯರಾಗುತ್ತೇವೆ. ವ್ಯಕ್ತಿಯನ್ನು ಅಧಃಪತನಕ್ಕೆ ತಳ್ಳುವುದೇ ಪಾಪಕರ್ಮ. ಪುಣ್ಯಕ್ಕೆ ಪ್ರೇರಕ ಋಜುಕರ್ಮ. ಕುಟಿಲ ಪಥವನ್ನು ತ್ಯಜಿಸಿ, ಸತ್ಯಪಥದಲ್ಲಿ ಮುನ್ನಡೆವುದೇ ಮಾನವಧರ್ಮ.

೪. ಉಪಸಂಹಾರ

ಜೀವನ ಸುಂದರವಾಗಬೇಕಾದರೆ, ಆನಂದಮಯವಾಗಬೇಕಾದರೆ, ಪ್ರಚಂಡ ಕ್ರಿಯಾಶಕ್ತಿಯೊಡನೆ ಜ್ಞಾನದ ಸಂಗಮವಾಗಬೇಕೆಂಬುದನ್ನು ಈಶೋಪನಿಷತ್ತು ಒತ್ತಿ ಹೇಳುತ್ತದೆ. ಈಶೋಪನಿಷತ್ತನ್ನು ರಚಿಸಿದ ಕಾಲದಲ್ಲಿ ಪ್ರಧಾನವಾಗಿ ಎರಡು ಜೀವನ ಮಾರ್ಗಗಳಿದ್ದುವು ; ಜ್ಞಾನ ಮತ್ತು ಕರ್ಮ ಮಾರ್ಗಗಳು

ಜ್ಞಾನಮಾರ್ಗ	ಕರ್ಮಮಾರ್ಗ
ಪರಮಾತ್ಮ	ಲೋಕ
ಯೋಗ	ಭೋಗ
ಶಮ	ಕರ್ಮ
ಏಕತೆ	ಅನೇಕತೆ
ಆತ್ಮಜ್ಞಾನ	ಲೌಕಿಕಜ್ಞಾನ
ನಿವೃತ್ತಿ	ಪ್ರವೃತ್ತಿ

ಜ್ಞಾನಮಾರ್ಗದಲ್ಲಿ ನಡೆಯುವವರು ನಿವೃತ್ತಿ ಮಾರ್ಗಕ್ಕೆ ವಿಶೇಷ ಗಮನ ಕೊಟ್ಟರು. ಕರ್ಮ ಮಾರ್ಗದಲ್ಲಿ ನಡೆವವರು ಪ್ರವೃತ್ತಿ ಮಾರ್ಗಕ್ಕೆ ಹೆಚ್ಚಿನ ಮಹತ್ವ ನೀಡಿದರು. ಹೀಗಾಗಿ ಜೀವನದಲ್ಲಿ ಸಾಮರಸ್ಯ ಮಾಯವಾಗತೊಡಗಿತು. ಈ ಸಂದರ್ಭದಲ್ಲಿ ಈಶೋಪನಿಷತ್ತು ಆ ಎರಡು ಮಾರ್ಗಗಳ ಸಮನ್ವಯಕ್ಕೆ ಕರೆಕೊಟ್ಟಿದೆ.

ಜಗತ್ತನ್ನು ಉಪೇಕ್ಷಿಸಿ, ಜೀವನದ ಸುಖ ಸಂತೋಷಗಳನ್ನು ಅಲ್ಲಗೆಳೆಯುವುದು ಸರ್ವಥಾ ಸಾಧ್ಯವಲ್ಲ. ಜಗತ್ತು ಕೂಡಾ ಈಶ್ವರನ ಆವಾಸಸ್ಥಾನ. ಈ ರಹಸ್ಯವನ್ನು ತಿಳಿದು, ಸತ್ಕರ್ಮದಲ್ಲಿ ನಿರತರಾಗಿ ನೂರು ವರ್ಷಗಳ ಬದುಕಲು ಇಚ್ಛಿಸಬೇಕು. ಪರರ ವಸ್ತುವಿಗೆ ಆಶೆಪಡಬಾರದು. ಇತರರ ವಸ್ತುಗಳಿಗೆ ಆಶೆಪಟ್ಟು ಅವುಗಳನ್ನು ಭೋಗಿಸುವವರು, ಪರೋಪಜೀವಿಗಳಾಗಿ ಸೋಮಾರಿ ಜೀವನ ನಡೆಸುತ್ತಾರೆ. ಇಂಥವರು ಆತ್ಮದ ವಿಕಾಸಕ್ಕೆ ವಿಘ್ನ ತಂದುಕೊಂಡು, ಘೋರಾಂಧಕಾರದಲ್ಲಿ ಬಿದ್ದು ಪರಿತಪಿಸಬೇಕಾಗುತ್ತದೆ.

ಪರಮಾತ್ಮನು ಸಚ್ಚಿದಾನಂದಸ್ವರೂಪನಾದಜ್ಯೋತಿರ್ಮಯ. ಅವನಿಗೆ ಶರೀರವಿಲ್ಲ. ಅವನು ನಿರ್ಗುಣ. ಆದುದರಿಂದ ಸಗುಣನೂ ಹೌದು. ಅವನು ವಿಶ್ವಪೋಷಕ, ವಿಶ್ವನಿಯಂತ್ರಕ, ಸೃಷ್ಟಿಕರ್ತ. ಅವನ ಅಂಶವಾದ ಆತ್ಮಕ್ಕೂ ಅವನ ಶಕ್ತಿಗಳಿವೆ. ಕೇವಲವಾಗಿ ಪರಮಾತ್ಮನಿಗೂ ಆತ್ಮನಿಗೂ ವ್ಯತ್ಯಾಸಗಳಿಲ್ಲ. ಪರಮಾತ್ಮನೇ ಆತ್ಮ ಎಂಬುದೇ ಪರಮ ಸಾಕ್ಷಾತ್ಕಾರ. ಯಾರು ಸಕಲ ಜೀವರಾಶಿಗಳನ್ನು ತಮ್ಮ ಆತ್ಮದಲ್ಲಿಯೂ ಆತ್ಮವನ್ನು ಸಕಲ ಜೀವರಾಶಿಗಳಲ್ಲಿಯೂ ಕಾಣುವರೋ ಅಂಥವರಿಗೆ ಜುಗುಪ್ಸೆ ಇಲ್ಲ,

ಅಶಾಂತಿ ಇಲ್ಲ. ಅವರಿಗೆ ಜೀವನ ಮಹತ್ವಪೂರ್ಣ. ಆಗ ದ್ವೈತ ಭಾವನೆ ಮಾಯವಾಗಿ ಅದ್ವೈತ ಸಿದ್ಧಿ.

ಮಾನವರು ವಿದ್ಯೆಯನ್ನೂ ಅವಿದ್ಯೆಯನ್ನೂ ತಿಳಿಯಬೇಕು. ವಿದ್ಯೆ ಎಂದರೆ ಆತ್ಮಜ್ಞಾನ; ಅವಿದ್ಯೆ ಎಂದರೆ ಲೌಕಿಕಕರ್ಮ ಮತ್ತು ಲೌಕಿಕ ಜ್ಞಾನ. ಈ ಲೋಕ ಪರಮಾತ್ಮನ ವ್ಯಕ್ತ ಸ್ವರೂಪ. ಅವನಿಗೆ ಲೋಕವಿದೂರವಾದ ಅವ್ಯಕ್ತ ಸ್ವರೂಪವಿದೆ. ವ್ಯಕ್ತ, ಅವ್ಯಕ್ತ–ಎರಡನ್ನೂ ಅರಿಯಲು ಯತ್ನಿಸಿ, ಸತ್ಕರ್ಮ ಮಾಡುತ್ತಲೆ ಆತ್ಮ ಜ್ಞಾನವನ್ನು ಪಡೆಯುವುದೇ ಜೀವನದ ಗುರಿ. ವಿದ್ಯೆ, ಅವಿದ್ಯೆ ; ಅವ್ಯಕ್ತ, ವ್ಯಕ್ತ–ಇವು ಪರಮಾತ್ಮನ ಸ್ವರೂಪಗಳೇ. ಜಗತ್ತೆಂಬುದು ಪರಮಾತ್ಮನನ್ನು ಮುಚ್ಚಿರುವ ಚಿನ್ನದ ಮುಚ್ಚಳ. ಆ ಮುಚ್ಚಳದ ಹಿಂದಿರುವವನೇ ಪರಮಾತ್ಮ. ಚಿನ್ನದ ಮುಚ್ಚಳದ ಸೊಬಗಿಗೆ ಮಾರು ಹೋಗಿ, ಅದರ ಹಿಂದಿರುವ ಪರಮಾತ್ಮನನ್ನು ಮರೆಯಬಾರದು. ಸಾಕ್ಷಾತ್ಕಾರವಾದಾಗ ಪರಮಾತ್ಮನೂ ಆತ್ಮನೂ ಬೇರೆಯಲ್ಲ ಎಂಬ ಜ್ಞಾನೋದಯ.

ಮಾನವರು ತಾವು ಮಾಡಿದುದನ್ನು ಸಮೀಕ್ಷೆ ಮಾಡುತ್ತ ಸನ್ಮಾರ್ಗದಲ್ಲಿ ಮುನ್ನಡೆಯಲು ಸದಾ ಯತ್ನಿಸಬೇಕು. ಶರೀರಕ್ಕೆ ಮರಣವಿದೆ. ಅದು ಭಸ್ಮವಾಗುವಂಥದು. ಆದರೆ ಆತ್ಮಕ್ಕೆ ಸಾವಿಲ್ಲ. ಲೌಕಿಕ ಜ್ಞಾನದೊಡನೆ ಅಧ್ಯಾತ್ಮದ ಸೇರ್ಪಡೆಯಾದರೆ, ಜೀವನಕ್ಕೆ ಹೊಸ ಬೆಳಕು. ಕಾಮಕಾಂಚನಗಳಲ್ಲಿ ಮುಳುಗಿ ಆತ್ಮವನ್ನು ಮರೆಯಬಾರದು. ಆತ್ಮನೊಂದೇ ಸತ್ಯವೆಂದು ತಿಳಿದು ಸತ್ಕರ್ಮಗಳನ್ನು ಉಪೇಕ್ಷೆ ಮಾಡಬಾರದು. ಸಮತ್ವ ದೃಷ್ಟಿಯಿಂದ ಲೌಕಿಕ, ಅಲೌಕಿಕ-ಎರಡನ್ನೂ ಸಮನ್ವಯ ಮಾಡುವುದು ಆವಶ್ಯಕ. ಪ್ರಚಂಡ ಕ್ರಿಯಾಶಕ್ತಿಯೊಡನೆ

ಜ್ಞಾನದ ಸಂಗಮವಾದರೆ ಜೀವನ ಮಹತ್ವಪೂರ್ಣ. ಆ ಮಹತ್ವಪೂರ್ಣ ಜೀವನಕ್ಕೆ, ದಾರಿದೀಪ ಈಶೋಪನಿಷತ್ತು.

ಈಶೋಪನಿಷತ್ತಿನ ಅಧ್ಯಯನ, ದಶೋಪನಿಷತ್ತುಗಳಲ್ಲಿ ಉಳಿದ ಕೇನ, ಐತರೇಯ, ಪ್ರಶ್ನ, ಕಠ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ- ಈ ಉಪನಿಷತ್ತುಗಳ ಅಧ್ಯಯನಕ್ಕೆ ಸಹಾಯಕ. ಆ ಉಪನಿಷತ್ತುಗಳಲ್ಲಿ ನಿರೂಪಿತವಾದ ತತ್ತ್ವಗಳ ಸಾರಾಂಶವನ್ನು ಮುಂದೆ ಹೇಳಿದೆ.

ಕೇನೋಪನಿಷತ್ತು :

ಕೇನೋಪನಿಷತ್ತು ಆರಂಭವಾಗುವುದು ಯಾರಿಂದ ಎಂಬ ಪ್ರಶ್ನೆಯಿಂದ, (ಕೇನ=ಯಾರಿಂದ). ಕೇನ ಎಂಬ ಪದದಿಂದ ಈ ಉಪನಿಷತ್ತಿನ ಮೊದಲ ಮಂತ್ರವು ಆರಂಭವಾಗುವುದರಿಂದ, ಈ ಉಪನಿಷತ್ತಿಗೆ ಕೇನೋಪನಿಷತ್ತು ಎಂದು ಹೆಸರಾಗಿದೆ. ಆಕೃತಿಯಲ್ಲಿ ಚಿಕ್ಕದಾದ ಈ ಉಪನಿಷತ್ತಿನಲ್ಲಿ ನಾಲ್ಕು ಖಂಡಗಳಿವೆ. ಬ್ರಹ್ಮಸ್ವರೂಪವನ್ನು ಇಲ್ಲಿ ವರ್ಣಿಸಿರುವುದು ಪ್ರಶ್ನೋತ್ತರಗಳ ಮೂಲಕ. ಶ್ರದ್ಧಾನ್ವಿತ ಶಿಷ್ಯನ ಸಂದೇಹಗಳನ್ನು ಜ್ಞಾನಿಯಾದ ಗುರು ತನ್ನ ಅನುಭೂತಿಯ ಬೆಳಕಿನಲ್ಲಿ ಪರಿಹರಿಸಿರುವುದು ಈ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಮನಸ್ಸು ಮತ್ತು ಇಂದ್ರಿಯಗಳನ್ನು ನಿಯಂತ್ರಿಸುವವರಾರು? ಬ್ರಹ್ಮವೇ ನಿಯಂತ್ರಕ ಶಕ್ತಿ ಎಂಬ ಉತ್ತರ ಪ್ರಥಮ ಖಂಡದಲ್ಲಿ ನಿರೂಪಿತವಾಗಿದೆ. ವಿವೇಕಿಗಳು ಆತ್ಮ ತತ್ತ್ವವನ್ನು ತಿಳಿದು ಅಮೃತರಾಗಬೇಕೆಂಬ ಆದೇಶ ಈ ಉಪನಿಷತ್ತಿನ ಎರಡನೆಯ ಖಂಡದಲ್ಲಿ ಬರುತ್ತದೆ. ಮೂರನೆಯ ಖಂಡದಲ್ಲಿ ಬ್ರಹ್ಮದ

ಅಸ್ತಿತ್ವದ ಪ್ರತಿಪಾದನೆ ಇದೆ. ಬ್ರಹ್ಮವು ಸರ್ವರಿಗೂ ಪ್ರಿಯವಾದುದರಿಂದ ಬ್ರಹ್ಮೋಪಾಸನೆಯೇ ಪರಮರಹಸ್ಯವೆಂದು ನಾಲ್ಕನೆಯ ಖಂಡದಲ್ಲಿ ಉಲ್ಲೇಖವಾಗಿದೆ. ಬ್ರಹ್ಮ ಸಾಕ್ಷಾತ್ಕಾರಕ್ಕೆ ತಪಸ್ಸು, ಇಂದ್ರಿಯ ನಿಗ್ರಹ ಮತ್ತು ಸತ್ಕರ್ಮಗಳೇ ಮಾರ್ಗವೆಂದು ಈ ಉಪನಿಷತ್ತಿನ ಮಾರ್ಗದರ್ಶನ. ಜಿಜ್ಞಾಸೆಯ ಮೂಲಕ ಈ ಉಪನಿಷತ್ತು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುತ್ತದೆ.

ಐತರೇಯೋಪನಿಷತ್ತು :

ಇದು ಕೂಡ ಆಕೃತಿಯಲ್ಲಿ ಚಿಕ್ಕದು. ಇದರಲ್ಲಿ ಮೂರು ಅಧ್ಯಾಯಗಳಿವೆ. ಇತರಾ ಎಂಬ ಮಹಿಳೆಯ ಪುತ್ರನಾದ ಐತರೇಯ ಈ ಉಪನಿಷತ್ತನ್ನು ರಚಿಸಿದುದರಿಂದ ಐತರೇಯೋಪನಿಷತ್ತು ಎಂಬ ಹೆಸರು ಬಂದಿದೆ. ಈ ಉಪನಿಷತ್ತಿನಲ್ಲಿ ಮೂರು ಅಧ್ಯಾಯಗಳಿವೆ.

ಮೊದಲನೆಯ ಅಧ್ಯಾಯದಲ್ಲಿ, ಈ ಸಮಸ್ತ ವಿಶ್ವದ ಉದಯಕ್ಕೆ ಮೊದಲು ಇದ್ದುದು ಆತ್ಮನೊಬ್ಬನೇ- "ಆತ್ಮಾವಾ ಇದಮೇಕ ಏವಾಗ್ರ ಆಸೀತ್"- ಎಂದು ಆತ್ಮನ ಶಕ್ತಿ ವೈಶಾಲ್ಯಗಳನ್ನು ನಿರೂಪಿಸಿ, ಆತ್ಮದ ಇಚ್ಛೆಯಿಂದಲೇ ಸಕಲ ಸೃಷ್ಟಿ-ಎಂದು ಹೇಳಿದೆ. ಎರಡನೆಯ ಅಧ್ಯಾಯದಲ್ಲಿ ಗರ್ಭವಾಸ, ಶಿಶುವಾಗಿ ಜನಿಸಿ ಬೆಳೆಯುವುದು, ಕಡೆಗೆ ವೃದ್ಧನಾಗಿ ಶರೀರವನ್ನು ತ್ಯಜಿಸಿ, ಮತ್ತೊಂದು ಶರೀರವನ್ನು ಪಡೆದುಕೊಳ್ಳುವುದು-ಹೀಗೆ ಜೀವಿಯ ಮೂರು ಅವಸ್ಥೆಗಳ ಚಿತ್ರಣವಿದೆ. ಸರ್ವ ಬಂಧನಗಳಿಂದ ಮುಕ್ತರಾಗಿ ಕೃತಕೃತ್ಯರಾಗಬೇಕಾದರೆ, ಆತ್ಮಸ್ವರೂಪವನ್ನು ತಿಳಿಯಬೇಕು. ಮೂರನೆಯ ಅಧ್ಯಾಯದಲ್ಲಿ ಪ್ರಜ್ಞಾನವೇ ಬ್ರಹ್ಮ-

ಎಂದು ಹೇಳಿ, ಬುದ್ಧಿಶಕ್ತಿ ಮತ್ತು ಜ್ಞಾನದ ಹಿರಿಮೆ ನಿರೂಪಿತ ವಾಗಿದೆ. ಪ್ರಜ್ಞಾನವೆಂದರೆ ಬುದ್ಧಿ ಶಕ್ತಿ ಮತ್ತು ಜ್ಞಾನ. ಬ್ರಹ್ಮವನ್ನು ತಿಳಿದವರು ಅಮೃತರಾಗುತ್ತಾರೆ- ಎಂಬುದೇ ಈ ಉಪನಿಷತ್ತಿನ ಸಂದೇಶ.

ಪ್ರಶ್ನೋಪನಿಷತ್ತು :

ಪ್ರಶ್ನರೂಪಗಳಲ್ಲಿ ತಾತ್ತ್ವಿಕ ನಿರೂಪಣೆ ಈ ಉಪನಿಷತ್ತಿನಲ್ಲಿರು ವುದರಿಂದಲೆ, ಪ್ರಶ್ನೋಪನಿಷತ್ತು ಎಂಬ ಹೆಸರು ಬಂದಿದೆ. ಕಬಂಧೀ ಕಾತ್ಯಾಯನ, ಭಾರ್ಗವ ವೈದರ್ಭಿ, ಕೌಸಲ್ಯ ಆಶ್ವಲಾ ಯನ, ಸೌರ್ಯಾಯಣೀ ಗಾರ್ಗ್ಯ, ಶೈಬ್ಯ, ಸತ್ಯಕಾಮ, ಸುಕೇಶ ಭಾರದ್ವಾಜ-ಎಂಬ ಆರು ಮಂದಿ, ಪಿಪ್ಪಲಾದನೆಂಬ ಋಷಿಯ ಬಳಿ ಸಾರಿ, ಪ್ರಶ್ನಿಸಿದ ಪ್ರಶ್ನೆಗಳೂ ಅವುಗಳಿಗೆ ಉಪದೇಶವಾಗಿ ಪಡೆದ ಉತ್ತರಗಳೂ ಈ ಉಪನಿಷತ್ತಿನಲ್ಲಿ ನಿರೂಪಿತವಾಗಿವೆ. ತನ್ನ ಬಳಿಗೆ ಬಂದವರಿಗೆ, ಒಂದು ವರ್ಷ ಕಾಲ ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ಸಾಧನೆಮಾಡಿ, ಅನಂತರ ಬನ್ನಿ -ಎಂಬುದೇ ಋಷಿಯ ಮೊದಲ ಆದೇಶವಾಯಿತು. ಆ ಆದೇಶದಂತೆ ಸಾಧನೆಮಾಡಿ, ಒಂದು ವರ್ಷ ಕಳೆದ ಬಳಿಕ, ಆ ಆರುಮಂದಿ ಪಿಪ್ಪಲಾದನ ಬಳಿಗೆ ಹೋಗಿ ಪ್ರಶ್ನಿಸಿದರು.

ಪ್ರಶ್ನೆ ೧: ಮೊದಲ ಪ್ರಶ್ನೆಯನ್ನು ಕೇಳಿದವನು ಕಬಂಧೀ ಕಾತ್ಯಾಯನ. ಈ ಜೀವರಾಶಿಗಳು ಎಲ್ಲಿಂದ ಬರುತ್ತವೆ?– ಎಂಬುದೇ ಅವನ ಪ್ರಶ್ನೆ.

ಉತ್ತರ: ಪ್ರಜಾಪತಿಯು ತಪಸ್ಸು ಮಾಡಿ, ಈ ಲೋಕ ವನ್ನು ಸೃಷ್ಟಿಸಿದನು. ಪ್ರಜಾಪತಿ ಎಂದರೆ ಪರಬ್ರಹ್ಮ. ಅವನು

ಜಡ ಮತ್ತು ಪ್ರಾಣಗಳನ್ನು ಸೃಷ್ಟಿಸಿದನು. ಇವೆರಡರ ಸಂಯೋಗದಿಂದ ಜಗತ್ತಿನ ವಿವಿಧ ವಸ್ತುಗಳ ಉತ್ಪತ್ತಿ.

ಪ್ರಶ್ನೆ ೨: ಇಂದ್ರಿಯಗಳು ಶರೀರವನ್ನು ಧರಿಸುವುದು ಹೇಗೆ? ಈ ಜೀವದಲ್ಲಿ ಶ್ರೇಷ್ಠರು ಯಾರು? ಈ ಪ್ರಶ್ನೆ ಕೇಳಿದವನು ಭಾರ್ಗವಿ ವೈದರ್ಭಿ.

ಉತ್ತರ: ಆತ್ಮನ ಇಚ್ಛೆಯಂತೆ ಇಂದ್ರಿಯಗಳು ಶರೀರದಲ್ಲಿ ಕೆಲಸಮಾಡುತ್ತವೆ. ಜೀವದಲ್ಲಿ ಪ್ರಾಣನೇ ಶ್ರೇಷ್ಠ.

ಪ್ರಶ್ನೆ ೩: ಈ ಪ್ರಶ್ನೆಯನ್ನು ಕೇಳಿದವನು ಕೌಸಲ್ಯ ಆಶ್ವಲಾಯನ. ಆವನ ಪ್ರಶ್ನೆ ಆರು ಉಪಪ್ರಶ್ನೆಗಳಾಗಿ ಒಡೆದಿವೆ.

೧. ಪ್ರಾಣನು ಏತರಿಂದ ಹುಟ್ಟುತ್ತಾನೆ?
೨. ಪ್ರಾಣನು ಶರೀರಕ್ಕೆ ಹೇಗೆ ಬರುತ್ತಾನೆ?
೩. ಪ್ರಾಣನು ತನ್ನ ಶಕ್ತಿಯನ್ನು ಹೇಗೆ ವಿಭಜಿಸಿಕೊಳ್ಳುತ್ತಾನೆ?
೪. ಪ್ರಾಣನು ಈ ಶರೀರವನ್ನು ಹೇಗೆ ತ್ಯಜಿಸುತ್ತಾನೆ?
೫. ಪ್ರಾಣನು ಬಾಹ್ಯ ಜಗತ್ತಿನಲ್ಲಿ ಹೇಗಿರುತ್ತಾನೆ?
೬. ಪ್ರಾಣನು ಜೀವಿಯ ಅಂತರ್ಯದಲ್ಲಿ ಹೇಗಿರುತ್ತಾನೆ?

ಉತ್ತರ:

೧. ಪ್ರಾಣನು ಆತ್ಮನಿಂದ ಹುಟ್ಟುತ್ತಾನೆ.
೨. ಪ್ರಾಣನು ಸಂಕಲ್ಪದಿಂದ ಶರೀರಕ್ಕೆ ಬರುತ್ತಾನೆ. ಅದಕ್ಕೆ ಕರ್ಮವು ನಿಮಿತ್ತ.
೩. ಪ್ರಾಣನು, ಪ್ರಾಣ ಅಪಾನ ವ್ಯಾನ ಸಮಾನ ಮತ್ತು ಉದಾನಗಳೆಂಬ ವಾಯುವಿನಿಂದ ತನ್ನ ಕೆಲಸ ಮಾಡುತ್ತಾನೆ.

೪. ಪ್ರಾಣನು ಒಂದು ನಾಡಿಯ ಮೂಲಕ ಜೀವನನ್ನು ಶರೀರದಿಂದ ಹೊರಕ್ಕೆ ತೆಗೆದುಕೊಂಡು ಹೋಗುತ್ತಾನೆ.

೫. ಪ್ರಾಣನು ಸೂರ್ಯನ ಮೂಲಕ ಜಗತ್ತಿನಲ್ಲಿ ಕ್ರಿಯಾ ಶೀಲನಾಗಿರುತ್ತಾನೆ

೬. ಆರನೆಯ ಪ್ರಶ್ನೆಗೆ ಉತ್ತರವಿಲ್ಲ. ಉತ್ತರ ಮೂರನೆಯ ಉತ್ತರವಲ್ಲಿರುವುದರಿಂದ ಪಿಪ್ಪಲಾದನು ಇದಕ್ಕೆ ಉತ್ತರ ಹೇಳಲಿಲ್ಲವೆಂದು ಭಾವಿಸಬಹುದು

ಪ್ರಶ್ನೆ ೪: ಈ ಶರೀರದಲ್ಲಿ ಎಚ್ಚರವಾಗಿರುವವನಾರು ? ನಿದ್ರಿಸುವವನಾರು? ಸ್ವಪ್ನವನ್ನು ಅನುಭವಿಸುವವನಾರು? ಎಂಬ ಪ್ರಶ್ನೆಗಳನ್ನು ಕೇಳಿದವನು ಸೌರ್ಯಾಯಣೀ ಗಾರ್ಗ್ಯ.

ಉತ್ತರ: ಜಾಗ್ರತ ಮತ್ತು ಸ್ವಪ್ನ ಸ್ಥಿತಿಗಳಲ್ಲಿ ಮನಸ್ಸು ಎಚ್ಚರವಾಗಿರುತ್ತದೆ. ಸುಷುಪ್ತಿಯಲ್ಲಿ ಮನಸ್ಸು ಆತ್ಮದಲ್ಲಿ ಲೀನವಾಗುತ್ತದೆ. ಸ್ವಪ್ನವನ್ನೂ ಅನುಭವಿಸುವವನು ಆತ್ಮನೇ.

ಪ್ರಶ್ನೆ ೫: ಓಂಕಾರವನ್ನು ಧ್ಯಾನಿಸುವವರಿಗೆ ಲಭಿಸುವ ಲೋಕವಾವುದು ? ಎಂಬ ಪ್ರಶ್ನೆ ಶೈಬ್ಯ ಸತ್ಯಕಾಮನದು.

ಉತ್ತರ: ಓಂಕಾರವು ಬ್ರಹ್ಮನ ಶಬ್ದರೂಪವಾದ ಪ್ರತಿನಿಧಿ. ಓಂಕಾರದ ಧ್ಯಾನದಿಂದ ಸಾಧಕರು ದುಃಖ ಮತ್ತು ಮೃತ್ಯುಗಳನ್ನು ದಾಟಿ, ಪರಬ್ರಹ್ಮವನ್ನು ಸೇರುತ್ತಾರೆ.

ಪ್ರಶ್ನೆ ೬. ಪುರುಷನು ಯಾರು? ಎಂದು ಸುಕೇಶ ಭಾರದ್ವಾಜನು ಪ್ರಶ್ನಿಸಿದನು.

ಉತ್ತರ: ಪುರುಷನೆಂದರೆ ಪರಬ್ರಹ್ಮ. ಅವನೇ ಪ್ರಾಣನನ್ನು ಸೃಷ್ಟಿಸಿದನು. ಪ್ರಾಣನಿಂದ ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ನೀರು, ಭೂಮಿ, ಇಂದ್ರಿಯ, ಮನಸ್ಸು, ಅನ್ನ,

ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕಗಳು ಮತ್ತು ನಾವು- ಸೃಷ್ಟಿಯಾದೆವು. ಇವೆಲ್ಲವನ್ನೂ ಒಳಗೊಳ್ಳುವವನು ಪುರುಷ. ಪುರುಷನಿಂದಲೆ ಇವೆಲ್ಲ!

ಪ್ರಶ್ನೋಪನಿಷತ್ತು ಪ್ರಾಚೀನ ಕಾಲದಲ್ಲಿದ್ದ ವೈಚಾರಿಕತೆಯ ಪ್ರಾಮುಖ್ಯತೆಯನ್ನು ತೋರುತ್ತದೆ.

ಕಠೋಪನಿಷತ್ತು

ಕಠೋಪನಿಷತ್ತು ಕೃಷ್ಣಯಜುರ್ವೇದದ ಕಾಠಕ ಶಾಖೆಗೆ ಸೇರಿದ್ದು. ಈ ಉಪನಿಷತ್ತಿನಲ್ಲಿ ಎರಡು ಅಧ್ಯಾಯಗಳಿವೆ. ಒಂದೊಂದರಲ್ಲೂ ಮೂರು ವಲ್ಲಿಗಳು. ಮೊದಲನೆಯ ಅಧ್ಯಾಯದಲ್ಲಿ ನಚಿಕೇತನು ಯಮನ ಬಳಿಗೆ ಹೋಗಿ ಮೂರು ವರಗಳನ್ನು ಪಡೆದ ಉಲ್ಲೇಖವಿದೆ. ನಚಿಕೇತನು ತನ್ನ ತಂದೆ ಪ್ರಸನ್ನನಾಗಬೇಕೆಂದು ಕೇಳಿದ್ದೇ ಮೊದಲ ವರ. ಸ್ವರ್ಗಸಾಧಕವಾದ ಅಗ್ನಿವಿದ್ಯೆಯೇ ಅವನು ಕೇಳಿದ ಎರಡನೆ ವರ. ಆತ್ಮಸ್ವರೂಪವನ್ನು ತಿಳಿಸಲು ಕೇಳಿದುದೇ ಮೂರನೆ ವರ. ನಚಿಕೇತನಿಗೆ ಮೊದಲ ಎರಡು ವರಗಳ ಅನುಗ್ರಹ ಪಡೆಯುವುದು ಕಷ್ಟವಾಗಲಿಲ್ಲ. ಮೂರನೆ ವರದ ಅನುಗ್ರಹ ಪಡೆಯಲು ನಚಿಕೇತನು ಪರೀಕ್ಷೆಗೆ ಒಳಗಾಗಬೇಕಾಯಿತು. ಪ್ರಲೋಭನಗಳ ಜಾಲಕ್ಕೆ ಸಿಕ್ಕದೆ, ಅವನು ಯಮನ ಅನುಗ್ರಹಕ್ಕೆ ಪಾತ್ರನಾದನು, ಬ್ರಹ್ಮವಿದ್ಯೆಗೆ ಅಧಿಕಾರಿಯಾದನು. ಯಮನ ಉಪದೇಶದ ಸಾರವನ್ನು ಮುಂದೆ ನಿರೂಪಿಸಿದೆ.

ಜಗತ್ತಿನಲ್ಲಿ ಶ್ರೇಯಸ್ಸಿನ ದಾರಿ ಇದೆ, ಪ್ರೇಯಸ್ಸಿನ ದಾರಿ ಇದೆ. ಶ್ರೇಯಸ್ಸಿನ ದಾರಿಯಿಂದ ಆತ್ಮಜ್ಞಾನ, ಪ್ರೇಯಸ್ಸಿನ

ದಾರಿಯಿಂದ ಲೌಕಿಕಸುಖ. ಆತ್ಮಜ್ಞಾನ ತರ್ಕದಿಂದ ಲಭಿಸು ವುದಿಲ್ಲ. ಅದು ಲಭಿಸುವುದು ಸಾಧನೆಯಿಂದ. ಆತ್ಮನು ಬ್ರಹ್ಮ ದಿಂದ ಬೇರೆಯಲ್ಲ. ಶರೀರ ನಾಶವಾದರೂ ಆತ್ಮನಿಗೆ ಸಾವಿಲ್ಲ. ಆತ್ಮನೇ ರಥಿ, ಶರೀರ ರಥ, ಬುದ್ಧಿಯೇ ಸಾರಥಿ, ಮನಸ್ಸು ಕಡಿವಾಣ, ಇಂದ್ರಿಯಗಳೇ ಕುದುರೆಗಳು, ವಿಷಯಗಳು ಅವುಗಳ ದಾರಿ; ಶಾಂತಚಿತ್ತರು, ಯುಕ್ತಮಾರ್ಗದಿಂದ ಇಂದ್ರಿಯಗಳನ್ನು ಹತೋಟಿಯಲ್ಲಿಡುತ್ತಾರೆ. ಆತ್ಮಜ್ಞಾನದ ಮಾರ್ಗ ಸುಲಭವಲ್ಲ. ದುರಾಚಾರಿಗಳೂ ಅಶಾಂತರೂ ಬ್ರಹ್ಮಜ್ಞಾನವನ್ನು ಪಡೆಯು ಲಾರರು. ಯುಕ್ತ ಗುರುಗಳನ್ನು ಆಶ್ರಯಿಸಿ, ಆತ್ಮಜ್ಞಾನ ಪಡೆಯಲು ಸಾಧಕರಾಗಬೇಕು.

ಎರಡನೆಯ ಅಧ್ಯಾಯದಲ್ಲಿ ಮುಖ್ಯವಾಗಿ ಆತ್ಮಜ್ಞಾನದ ವಿಚಾರ ನಿರೂಪಿತವಾಗಿದೆ. ಬಹು ಜನರು ಬಹಿರ್ಮುಖತೆ ಯಲ್ಲಿಯೇ ಮಗ್ನರು. ವಿವೇಕಿಗಳಾದ ಧೀರರು ಮಾತ್ರ ಅಮೃತತತ್ತ್ವವನ್ನು ಅಪೇಕ್ಷಿಸಿ, ಅಂತರಾತ್ಮನ ಕಡೆಗೆ ತಮ್ಮ ದೃಷ್ಟಿ ಹರಿಸುತ್ತಾರೆ. ಶೋಕವನ್ನು ದಾಟಿ ಮುಕ್ತರಾಗಲು ಆತ್ಮ ಜ್ಞಾನವೇ ಸಾಧನ. ಕಾಮಗಳಿಂದ ದೂರವಾದರೆ, ಬದುಕಿರು ವಾಗಲೆ ಬ್ರಹ್ಮಸಾಕ್ಷಾತ್ಕಾರ. ಈ ಉಪನಿಷತ್ತು ಬ್ರಹ್ಮಸಾಕ್ಷಾ ತ್ಕಾರವೇ ಜೀವನದ ಗುರಿ ಎಂಬುದನ್ನು ಸಾರಿದೆ. ಕೇವಲ ಪ್ರವಚನದಿಂದ, ಮೇಧಾಶಕ್ತಿಯಿಂದ, ಬಹುಶ್ರವಣದಿಂದ ಆ ಸಾಕ್ಷಾತ್ಕಾರ ಲಭಿಸುವುದಿಲ್ಲ. ಅದಕ್ಕೆ ಸಾಧನೆ ಬೇಕು. ಅದ ರಿಂದಲೆ ಸಿದ್ಧಿ. "ಎದ್ದೇಳಿ, ಎಚ್ಚರಗೊಳ್ಳಿ, ಶ್ರೇಷ್ಠಗುರುಗಳಿಂದ ಆತ್ಮತತ್ತ್ವವನ್ನು ತಿಳಿಯಿರಿ" ಎಂಬುದೇ ಈ ಉಪನಿಷತ್ತಿನ ಸಂದೇಶ.

ತೈತ್ತಿರೀಯೋಪನಿಷತ್ತು

ಈ ಉಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದ್ದು. ಯಾಜ್ಞವಲ್ಕ್ಯನಿಗೂ ಆತನ ಗುರುವಾದ ವೈಶಂಪಾಯನನಿಗೂ ಒಂದು ಸಲ ವಿರಸವುಂಟಾಗಿ, ಗುರು ತನ್ನ ಶಿಷ್ಯನಿಗೆ ತಾನು ಕಲಿತ ವಿದ್ಯೆಯನ್ನು ಹಿಂತಿರುಗಿಸಬೇಕೆಂದು ಆಜ್ಞೆ ಮಾಡಿದನು. ಆಗ ಯಾಜ್ಞವಲ್ಕ್ಯನು ಕಲಿತ ವಿದ್ಯೆಯನ್ನು ವಮನ ಮಾಡಿದನೆಂದೂ ಅದನ್ನು ವೈಶಂಪಾಯನನ ಇತರರ ಶಿಷ್ಯರು ತಿತ್ತಿರಿ ಪಕ್ಷಿಗಳ ರೂಪತಾಳಿ ವಮನ ಮಾಡಿದ ವೇದಗಳನ್ನು ಸ್ವೀಕರಿಸದರೆಂದು ಪ್ರತೀತಿ. ಬಹುಶಃ ಯಾಜ್ಞವಲ್ಕ್ಯನು ಆ ಶಿಷ್ಯರಿಗೆ, ತಾನು ಕಲಿತ ವಿದ್ಯೆಯನ್ನು ಕಲಿಸಿರಬೇಕು. ಈ ಸನ್ನಿವೇಶ ಪ್ರತಿಮಾರೂಪವಾಗಿ ಚಿತ್ರಿತವಾಗಿದೆ. ತಿತ್ತಿರಿಯಿಂದ ತೈತ್ತಿರೀಯ ಎಂಬ ಪದದ ನಿಷ್ಪತ್ತಿ. ಈ ಉಪನಿಷತ್ತಿನಲ್ಲಿ ಶೀಕ್ಷಾವಲ್ಲೀ, ಬ್ರಹ್ಮಾನಂದವಲ್ಲೀ, ಭೃಗುವಲ್ಲೀ—ಎಂಬ ಮೂರು ಅಧ್ಯಾಯಗಳಿವೆ.

ಮೊದಲನೆಯ ಅಧ್ಯಾಯದಲ್ಲಿ ಸ್ವರ, ವರ್ಣ, ಮಾತ್ರೆ ಮತ್ತು ಉಚ್ಚಾರಣೆಗಳನ್ನು ಸರಿಯಾಗಿ ಕಲಿತು ವೇದಾಧ್ಯಯನಕ್ಕೆ ತೊಡಗಬೇಕು, ಅನಂತರ ಉಪಾಸನೆ, ತದನಂತರ ಆರೋಗ್ಯ ಐಶ್ವರ್ಯ ಮತ್ತು ಜ್ಞಾನಕ್ಕಾಗಿ ಪ್ರಾರ್ಥನೆ ಮಾಡಬೇಕೆಂಬ ಆದೇಶವಿದೆ. ಮಾನವರು ಸತ್ಯ, ನ್ಯಾಯ, ಜ್ಞಾನ, ಅಧ್ಯಯನ, ಧ್ಯಾನ, ತಪಸ್ಸು, ಪ್ರೀತಿ, ಸಂತಾನಾಭಿವೃದ್ಧಿ, ಮಕ್ಕಳು, ಆನಂದ, ತ್ಯಾಗ, ಅತಿಥಿಸತ್ಕಾರ, ವೈರಾಗ್ಯ—ಇವೆಲ್ಲಕ್ಕೂ ಗಮನಕೊಡಬೇಕೆಂಬ ವಿವರವಿದೆ.

ಎರಡನೆಯದಾದ ಬ್ರಹ್ಮಾನಂದವಲ್ಲಿಯಲ್ಲಿ ಬ್ರಹ್ಮಸ್ವರೂಪದ ವರ್ಣನೆ ಬರುತ್ತದೆ. ಬ್ರಹ್ಮವೆಂದರೆ ಸತ್ಯ, ಜ್ಞಾನ ಮತ್ತು

ಅನಂತ. ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ. ಬ್ರಹ್ಮಸಾಕ್ಷಾತ್ಕಾರವನ್ನು ಮುದುಕರಾದ ಮೇಲೆ ಪಡೆಯುವುದಲ್ಲ. ಆಶಿಷ್ಠರೂ ದೃಢಿಷ್ಠರೂ ಬಲಿಷ್ಠರೂ ಆದ ಯುವಕರಾಗಿರುವಾಗಲೆ ಈ ಸಾಧನೆಯಲ್ಲಿ ತೊಡಗಬೇಕು. ಆತ್ಮಕ್ಕೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಐದು ಕೋಶಗಳಿವೆ.

ಮೂರನೆಯ ಭೃಗುವಲ್ಲಿಯಲ್ಲಿ ವರುಣನೆಂಬ ಋಷಿ ತನ್ನ ಬಳಿಗೆ ಜ್ಞಾನಾರ್ಜನೆಗಾಗಿ ಬಂದ ಭೃಗುವಿಗೆ ಉಪದೇಶ ಮಾಡಿದ ನಿರೂಪಣೆ ಬರುತ್ತದೆ. ತಪಸ್ಸಿನಿಂದಲೆ ಭೃಗುವು ಜ್ಞಾನಿಯಾಗುವಂತೆ ಮಾಡುವುದು ವರುಣನ ಹಿರಿಮೆ. ಭೃಗುವು ತನ್ನ ತಪಸ್ಸಿನಿಂದ ಅನ್ನವೇ ಬ್ರಹ್ಮವೆಂದು ತಿಳಿಯುತ್ತಾನೆ ಪ್ರಾರಂಭದಲ್ಲಿ. ಅನ್ನವೆಂದರೆ ಕೇವಲ ಆಹಾರವಲ್ಲ; ಸಮಸ್ತ ಲೌಕಿಕದ ಭೌತ ಸಾಮಗ್ರಿಗಳೇ ಅನ್ನ. ಭೃಗುವಿಗೆ ತಪಸ್ಸಿನಿಂದ ಪ್ರಾಣವೇ ಬ್ರಹ್ಮವೆಂದು ತಿಳಿಯಿತು. ಪ್ರಾಣವೆಂದರೆ ಪ್ರೀತಿ, ಪ್ರಣಯ, ಸ್ನೇಹ, ರಾಗದ್ವೇಷಗಳು. ಪುನಃ ತಪಸ್ಸು ಮಾಡಿದ ಭೃಗುವಿಗೆ ಮನೋಮಯವೇ ಬ್ರಹ್ಮವೆಂದು ತಿಳಿಯಿತು. ಬುದ್ಧಿ ಮನಸ್ಸುಗಳ ವ್ಯಾಪಾರವಾದ ಕಾವ್ಯ, ತತ್ತ್ವ, ವೈಚಾರಿಕತೆ–ಇವೆಲ್ಲ ಮನೋಮಯಕ್ಕೆ ಸೇರಿದವು. ಭೃಗುವಿನ ತಪಸ್ಸು ಮುಂದುವರಿದು ವಿಜ್ಞಾನವು ಬ್ರಹ್ಮವೆಂಬ ಬೋಧೆಯಾಯಿತು. ವಿಜ್ಞಾನವೆಂದರೆ ಆಧ್ಯಾತ್ಮ. ಕಡೆಗೆ ತಪಸ್ಸಿನಿಂದ ಭೃಗುವಿಗೆ ಆನಂದವೇ ಬ್ರಹ್ಮವೆಂದು ತಿಳಿಯಿತು. ಆನಂದವೆಂದರೆ ಬ್ರಹ್ಮಸಾಕ್ಷಾತ್ಕಾರ. ಸಕಲವೂ ಆನಂದದಿಂದ ಹುಟ್ಟಿ, ಆನಂದದಲ್ಲಿ ಜೀವಿಸಿ, ಕಡೆಗೆ ಆನಂದವನ್ನು ಪ್ರವೇಶಿಸುವ ಸತ್ಯ ಭೃಗುವಿಗೆ ತಿಳಿಯಿತು.

ಈ ಸಾಕ್ಷಾತ್ಕಾರದಿಂದ ಮಾನವರು ಮಹಾತ್ಮರಾಗುತ್ತಾರೆ- ಎಂಬುದು-ತೈತ್ತಿರೀಯೋಪನಿಷತ್ತಿನ ಸಂದೇಶ.

ಮುಂಡಕೋಪನಿಷತ್ತು :

ಇದು ಅಥರ್ವವೇದಕ್ಕೆ ಸೇರಿದ ಉಪನಿಷತ್ತು. ಇದರಲ್ಲಿ ೬೪ ಮಂತ್ರಗಳಿಂದ ಕೂಡಿದ ಮೂರು ಅಧ್ಯಾಯಗಳಿವೆ. ಇದರ ವಿಚಾರಧಾರೆಯಂತೆ, ಪರಾವಿದ್ಯೆ, ಅಪರಾವಿದ್ಯೆ ಎಂದು ಎರಡು ರೀತಿಯ ವಿದ್ಯೆ ಈ ಲೋಕದಲ್ಲಿದೆ. ಪರಾವಿದ್ಯೆ ಎಂದರೆ ಬ್ರಹ್ಮ ವಿದ್ಯೆ. ಅಕ್ಷರವೇ ಬ್ರಹ್ಮ. ಅಕ್ಷರವೆಂದರೆ ನಾಶವಿಲ್ಲದುದು. ಅಕ್ಷರದಿಂದಲೆ ಸಮಸ್ತ ಸೃಷ್ಟಿ. ಅಪರಾವಿದ್ಯೆ ಎಂದರೆ ಲೌಕಿಕವಿದ್ಯೆ.

ಅವಿದ್ಯೆಯ ಮಧ್ಯದಲ್ಲಿದ್ದು ತಾವೇ ಧೀರರು ಪಂಡಿತರು ಎಂದು ತಿಳಿದುಕೊಂಡವರು ಮೂಢರು. ತಪಸ್ಸು, ಶ್ರದ್ಧೆ ಮತ್ತು ಬ್ರಹ್ಮಚರ್ಯಗಳಿಂದ ಅಮೃತನೂ ಅವ್ಯಯನೂ ಆದ ಬ್ರಹ್ಮ ವನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕು. ಓಂಕಾರವು ಶಬ್ದ ಬ್ರಹ್ಮ. ಅದು ಧನುಸ್ಸಿನಂತೆ. ಆತ್ಮನೇ ಬಾಣ, ಲಕ್ಷ್ಯವು ಬ್ರಹ್ಮ. ಓಂಕಾರವೆಂಬ ಧನುಸ್ಸಿನ ಮೂಲಕ ಆತ್ಮವೆಂಬ ಬಾಣದಿಂದ ಬ್ರಹ್ಮವೆಂಬ ಲಕ್ಷ್ಯದ ಕಡೆಗೆ ಹೊಡೆಯಬೇಕು. ಆಗಲೆ ಬ್ರಹ್ಮ ಮತ್ತು ಆತ್ಮರ ಸಂಗಮ. ಆಗ ಆಗುವ ಸಾಕ್ಷಾತ್ಕಾರವೆ ಬ್ರಹ್ಮಸಾಕ್ಷಾತ್ಕಾರ. ಬ್ರಹ್ಮವನ್ನು ತಿಳಿದವರು ಬ್ರಹ್ಮವೇ ಆಗುತ್ತಾರೆ.

ಮಾಂಡೂಕ್ಯೋಪನಿಷತ್ತು

ಇದು ಕೂಡ ಅಥರ್ವವೇದಕ್ಕೆ ಸೇರಿದ ಉಪನಿಷತ್ತು. ಇದರಲ್ಲಿ ಹನ್ನೆರಡು ಮಂತ್ರಗಳಿವೆ. ಮನುಷ್ಯನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ-ಎಂಬ ಮೂರು ಅವಸ್ಥೆಗಳೊಡನೆ ತುರೀಯ

ಎಂಬ ಅವಸ್ಥೆಯೂ ಇದೆ–ಎಂಬ ವಿಚಾರ ಈ ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿದೆ. ತುರೀಯ ಸ್ಥಿತಿಯಲ್ಲಿ ಎಲ್ಲವನ್ನೂ ಸಾಕ್ಷಿ ರೂಪದಲ್ಲಿ ನೋಡಬಹುದು. ತುರೀಯ ಸ್ಥಿತಿಗೇರುವುದೇ ಜೀವನದ ಪರಮ ಗುರಿ. ನಿತ್ಯ ಶುದ್ಧ ಬುದ್ಧ ಮುಕ್ತ ಸ್ವರೂಪ ನಾದ ಆತ್ಮನು ದೇಹೇಂದ್ರಿಯ ಸಂಘಾತದೊಂದಿಗೆ ತಾದಾತ್ಮ್ಯ ವನ್ನು ಪಡೆದು ಜೀವನೆನಿಸುತ್ತಾನೆ. ಜೀವನು ಜನ್ಮಮೃತ್ಯುಗಳ ಚಕ್ರದಲ್ಲಿ ಸುತ್ತುವುದೇ ಸಂಸಾರ. ಸಂಸಾರದಿಂದ ಬಿಡುಗಡೆ ಹೊಂದಲು ಓಂಕಾರ ಮಂತ್ರೋಪಾಸನೆ ಸಹಾಯಕ. ಬ್ರಹ್ಮ ವಿದರಿಗೆ ಎಲ್ಲವೂ ಬ್ರಹ್ಮವೆಂಬ ಅನುಭವವಾಗುತ್ತದೆ. ಅದೇ ಪರಮಾನುಭೂತಿ.

ಬೃಹದಾರಣ್ಯಕೋಪನಿಷತ್ತು :

ಅರಣ್ಯದಲ್ಲಿ ತಪಸ್ಸಿನಲ್ಲಿ ತೊಡಗಿದ ಋಷಿಗಳಿಂದ ರಚಿತ ವಾದುದು ಆರಣ್ಯಕ. ಈ ಉಪನಿಷತ್ತು ದೊಡ್ಡದಾದುದರಿಂದ 'ಬೃಹತ್' ಎಂಬ ಹೆಸರಿದೆ. ಇದರಲ್ಲಿ ಆರು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಜ್ಞಾನ ನಾಶದಿಂದ ಬ್ರಹ್ಮ ಜ್ಞಾನವು ಲಭಿಸುತ್ತದೆ ಎಂದು ಹೇಳಿದೆ. ಎರಡನೆಯ ಅಧ್ಯಾಯ ದಲ್ಲಿ ಯಾಜ್ಞವಲ್ಕ್ಯ ಮತ್ತು ಅವನ ಪತ್ನಿ ಮೈತ್ರೇಯಿ ಇವರ ಸಂಭಾಷಣೆ ಇದೆ. ಅದರ ಸಾರ ಆತ್ಮಜ್ಞಾನದಿಂದಲೆ ಅಮೃತತ್ವ ಎಂದು. ಮೂರನೆಯ ಅಧ್ಯಾಯದಲ್ಲಿ ಜನ್ಮಾಂತರಕ್ಕೆ ಕರ್ಮವೇ ಕಾರಣವೆಂದು ಹೇಳಿದೆ. ಸಾಕ್ಷಾತ್ಕಾರಕ್ಕಾಗಿ ಮಾಡುವ ಸಾಧ ನೆಯೆ ಉಪಾಸನೆ. ನಾಲ್ಕನೆಯ ಅಧ್ಯಾಯಲ್ಲಿ ಆತ್ಮವು ಸ್ವಯಂ ಜ್ಯೋತಿ ರೂಪವಾದುದೆಂದು ವರ್ಣಿತವಾಗಿದೆ. ಶಾಂತರೂ ದಾಂತರೂ ಉಪರತರೂ ತಿತಿಕ್ಷುಗಳೂ ಸಮಾಹಿತರೂ ಆದವರು

ಆತ್ಮಜ್ಞಾನ ಪಡೆದು ಬ್ರಹ್ಮವೇ ಆಗುತ್ತಾರೆ. ದಾಂತರೆಂದರೆ ತೃಷ್ಣೆ ಇಲ್ಲದವರು. ಇಂದ್ರಿಯನಿಗ್ರಹ ಮಾಡಿದವರೆ ಉಪರತರು. ತಿತಿಕ್ಷುಗಳೆಂದರೆ ಉಷ್ಣ, ಚಳಿ; ಲಾಭ, ನಷ್ಟ; ಮೊದಲಾದ ದ್ವಂದ್ವಗಳನ್ನು ಸಮವಾಗಿ ಕಾಣುವವರು. ಸಮಾಹಿತರೆಂದರೆ ಸಮಾಧಾನಿಗಳು. ಐದನೆ ಅಧ್ಯಾಯದಲ್ಲಿ ದಮ, ದಾನ, ದಯೆ– ಇವು ಮೂರು ಸಾಧಕರ ಉಪಾಸನಾ ಮಾರ್ಗಗಳೆಂದು ನಿರೂಪಿತ ವಾಗಿದೆ. ಆರನೆಯ ಅಧ್ಯಾಯದಲ್ಲಿ, ಪುತ್ರನು ಹುಟ್ಟಿದೊಡನೆ, ಆ ಶಿಶು ವಿದ್ಯೆ ಮತ್ತು ಸಂಪತ್ತುಗಳಲ್ಲಿ ತಂದೆಯನ್ನು ಮೀರಿಸಲಿ, ಅಜ್ಜನನ್ನು ಮೀರಿಸಲೆಂಬ ಪ್ರಾರ್ಥನೆ ಇದೆ. ಮಾನವಕುಲ ವಿಕಾಸವಾಗಲೆಂಬುದೇ ಪ್ರಾಚೀನ ಋಷಿಗಳ ಅಭೀಪ್ಸೆಯಾಗಿ ತ್ತೆಂಬುದಕ್ಕೆ ಈ ಪ್ರಾರ್ಥನೆ ಸಾಕ್ಷಿ.

ಛಾಂದೋಗ್ಯೋಪನಿಷತ್ತು:

ಈ ಉಪನಿಷತ್ತು ಎಂಟು ಅಧ್ಯಾಯಗಳಿಂದ ಕೂಡಿದ ದೊಡ್ಡ ಉಪನಿಷತ್ತು. ಮೊದಲನೆಯ ಅಧ್ಯಾಯದಲ್ಲಿ ಬ್ರಹ್ಮದ ಪ್ರತೀಕ ವಾದ ಓಂಕಾರದ ಉಪಾಸನೆ ನಿರೂಪಿತವಾಗಿದೆ. ಓಂಕಾರೋ ಪಾಸನೆಯಿಂದ ಅಮೃತತ್ವ ಲಾಭವಾಗುವುದೆಂದು ಎರಡನೆಯ ಅಧ್ಯಾಯದಲ್ಲಿ ಹೇಳಿದೆ. ಮೂರನೆಯ ಅಧ್ಯಾಯದಲ್ಲಿ ಗಾಯತ್ರೀ ಉಪಾಸನೆಯು ಬ್ರಹ್ಮೋಪಾಸನೆ ಎಂದೇ ಹೇಳಿದೆ. ನಾಲ್ಕನೆಯ ಅಧ್ಯಾಯದಲ್ಲಿ, ವಿದ್ಯಾಪ್ರಾಪ್ತಿಗೆ ಶ್ರದ್ಧೆ, ಅನ್ನದಾನ ಮತ್ತು ವಿನಯಗಳು ಆವಶ್ಯಕವೆಂದು ಹೇಳಿದೆ. ಐದನೆಯ ಅಧ್ಯಾಯ ದಲ್ಲಿ ಸಗುಣಬ್ರಹ್ಮೋಪಾಸಕರ ಹಾಗೂ ಊರ್ಧ್ವರೇತಸ್ಕರ ಸಾಧನೆಗಳ ವಿಚಾರ ಬರುತ್ತದೆ. ಆರನೆಯ ಅಧ್ಯಾಯದಲ್ಲಿ ಉದ್ದಾಲಕ ಆರುಣಿಯು ತನ್ನ ಪುತ್ರನಾದ ಶ್ವೇತಕೇತುವಿಗೆ ಮಾಡಿದ ಉಪದೇಶದ ವಿವರಗಳಿವೆ, ಶ್ವೇತಕೇತು, ತತ್–

ತ್ವಮ್-ಅಸಿ, (ಬ್ರಹ್ಮವೇ ನೀನಾಗಿದ್ದೀಯೆ) ಎಂಬ ಪರಮ ರಹಸ್ಯವನ್ನು ತಿಳಿದನು. ಏಳನೆಯ ಅಧ್ಯಾಯದಲ್ಲಿ ಪರಮಾರ್ಥ ಸತ್ಯವನ್ನು ತಿಳಿಯುವುದೇ ವಿಜ್ಞಾನ, ವಿಜ್ಞಾನಕ್ಕೆ ಮನನವೂ, ಮನನಕ್ಕೆ ಶ್ರದ್ಧೆಯೂ, ಶ್ರದ್ಧೆಗೆ ನಿಷ್ಠೆಯೂ, ನಿಷ್ಠೆಗೆ ಇಂದ್ರಿಯ ಸಂಯಮವೂ, ಇಂದ್ರಿಯ ಸಂಯಮಕ್ಕೆ ಭೂಮವಾದ ಸುಖವೂ ಆಶ್ರಯವಾಗಿರುತ್ತದೆ ಎಂಬ ನಿರೂಪಣೆ ಇದೆ. ಎಂಟನೆಯ ಅಧ್ಯಾಯದಲ್ಲಿ, ಮೃತ್ಯುಗ್ರಸ್ತವಾದ ಶರೀರದಲ್ಲಿ ವಾಸಿಸುವುದು, ಅಮೃತನೂ ಅಶರೀರನೂ ಆದ ಆತ್ಮನೇ ಎಂಬ ನಿರೂಪಣೆ ಇದೆ.

ಪ್ರತಿಯೊಬ್ಬರಲ್ಲಿಯೂ ಆತ್ಮನಿದ್ದಾನೆ, ಆತ್ಮ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಜೀವನದ ಪರಮಗುರಿ ಎಂದು ಉಪನಿಷತ್ತುಗಳು ಸಾರಿವೆ. ಈ ಜಗತ್ತನ್ನು ಮಿಥ್ಯೆ ಯೆಂದು ತಿರಸ್ಕರಿಸದೆ, ಸತ್ಕರ್ಮಗಳಲ್ಲಿ ಪ್ರವೃತ್ತರಾಗಿ, ಲೌಕಿಕ ಕ್ಷೇಮದ ಕಡೆಗೂ ಗಮನ ಕೊಡಬೇಕೆಂಬುದು ಉಪನಿಷತ್ತುಗಳ ಆದೇಶ. ಶಂಕರ, ಮಧ್ವ, ರಾಮಾನುಜ ಮೊದಲಾದವರ ವ್ಯಾಖ್ಯಾನಗಳ ಬೆಳಕಿನಲ್ಲಿ ಉಪನಿಷತ್ತುಗಳ ಅಧ್ಯಯನ ಮಾಡ ಬಹುದು. ಆದರೆ ಸ್ವಪ್ರಯತ್ನದಿಂದ ಉಪನಿಷತ್ತುಗಳನ್ನು ಅರ್ಥ ಮಾಡಿಕೊಳ್ಳುವ ಸಾಹಸದಿಂದ ದೊರಕುವ ಫಲ ಶ್ರೇಷ್ಠ ವಾದುದು. ಇಂದಿನ ಜೀವನದಲ್ಲಿ ಮಾನವರು ಎಚ್ಚರವಾಗಿರು ವುದು ಅನ್ನಮಯ, ಪ್ರಾಣಮಯ ಮತ್ತು ಮನೋಮಯ ಕೋಶಗಳಲ್ಲಿ. ವಿಜ್ಞಾನಮಯ ಮತ್ತು ಆನಂದಮಯಕೋಶ ಗಳಲ್ಲಿ ಎಚ್ಚತ್ತಾಗಲೆ ನಿಜವಾದ ಶಾಂತಿ ಮತ್ತು ಆನಂದಗಳು ಲಭಿಸುವುದು. ಉಪನಿಷತ್ತುಗಳ ಸಾರವನ್ನು ಅರ್ಥಮಾಡಿ ಕೊಂಡು, ಅದನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಲು ಯತ್ನಿ ಸಿದರೆ, ಸಮಾಜದ ಹಾಗೂ ವ್ಯಕ್ತಿಯ ಅಭ್ಯುದಯವಾಗುತ್ತದೆ.

ಕೆ.ಸ. ೨೪೩೧೦—ಮೈ.ವಿ.ಮು.—೫.೦೦೦ ಪ್ರತಿಗಳು—೨೦-೫-೮೩

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ
ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣ ಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚೆನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ